# ಬೃಹಚ್ಚರಣ

ಸಂಘದ ತ್ರೈಮಾಸಿಕ ವಾರ್ತಾ ಪತ್ರಿಕೆ

| ಸಂಘದ ಸದಸ್ಯರಾಗಿ | |
|---|---|
| ಮಹಾ ಪೋಷಕರು | – ₹ 25,000/– |
| ಪೋಷಕರು | – ₹ 5,000/– |
| ಸದಸ್ಯತ್ವ | – ₹ 1,000/– |
| ವಾರ್ಷಿಕ ನಿರ್ವಹಣೆ | – ₹ 500/– |

ಸಂಪುಟ : 9 ಸಂಚಿಕೆ : 2 ಖಾಸಗಿ ಪ್ರಸಾರಕ್ಕಾಗಿ ಏಪ್ರಿಲ್–ಜೂನ್ 2019


## ಅಧ್ಯಕ್ಷರ ನುಡಿ

ಆತ್ಮೀಯರೇ ನಮಸ್ಕಾರ,

ಮುಂಬರುವ ದಿನಗಳಲ್ಲಿ ನಾಗಪಂಚಮಿ, ವರಮಹಾಲಕ್ಷ್ಮೀವ್ರತ, ಶ್ರೀಕೃಷ್ಣ ಜನ್ಮಾಷ್ಟಮಿ, ಸ್ವರ್ಣಗೌರಿ ವ್ರತ, ಗಣೇಶ ಚತುರ್ಥಿ, ಉಪಾಕರ್ಮ, ಅನಂತಪದ್ಮನಾಭ ವ್ರತ, ಮುಂತಾದ ಹಬ್ಬಗಳ ಸಾಲೇ ಬರುತ್ತಿದೆ. ನಮ್ಮ ಸಮುದಾಯದ ಕುಟುಂಬದ ಸದಸ್ಯರೆಲ್ಲರಿಗೂ ಶುಭವಾಗಲೆಂದು ಹಾರೈಸುತ್ತೇನೆ.

2018–19ರ ಸರ್ವ ಸದಸ್ಯರ ಸಭೆಯು ಅಚ್ಚುಕಟ್ಟಾಗಿ ದಿನಾಂಕ 07–07–19 ರಂದು ಬಸವನಗುಡಿ ಮಲ್ಲಿಕಾರ್ಜುನ ದೇವಸ್ಥಾನದ ಭ್ರಮರಾಂಭ ಮಂಗಳ ಸದನದಲ್ಲಿ ನಡೆಯಿತು. ಅಂತೆಯೇ ಅಂದು, ಸಂಘದ ಲೆಕ್ಕಪತ್ರ ಮಂಡನೆ ಸರ್ವಾನುಮತದಿಂದ ಅಂಗೀಕೃತವಾಗಿದ್ದು ಸಂತೋಷ. ಕಾರ್ಯಕಾರಿ ಸಮಿತಿ ಸದಸ್ಯರಿಗೂ ಹಾಗೂ ನಿಮ್ಮೆಲ್ಲರ ಸಹಕಾರಕ್ಕೆ ಧನ್ಯವಾದಗಳು.

ಸಂಘದ ಅಧ್ಯಕ್ಷನಾಗಿ ಎಂಟು ವರ್ಷಗಳು ಸೇವೆ ಸಲ್ಲಿಸಿರುವ ನಾನು ಸ್ವಇಚ್ಛೆಯಿಂದ ಕಾರ್ಯಕಾರಿ ಸಮಿತಿ ಹಿರಿಯ ಸದಸ್ಯ ಶ್ರೀ ಬಿ. ಸುಬ್ರಹ್ಮಣ್ಯಂ ರವರಿಗೆ ಸಂಘದ ಅಧ್ಯಕ್ಷರಾಗಿ ಮುಂದುವರಿಯಲು ಕೋರಿದ್ದೇನೆ.

ನನ್ನೊಂದಿಗೆ ಇದುವರೆಗೂ ಕಾರ್ಯದರ್ಶಿಯಾಗಿ ಸಂಘವನ್ನು ಮುನ್ನಡೆಸಲು ಸಹಕರಿಸಿದ ಶ್ರೀ ವಿ.ಎಸ್. ಮಣಿಯವರಿಗೆ ಧನ್ಯವಾದಗಳು. ಸಂಘದ ಉಪಾಧ್ಯಕ್ಷರಾಗಿದ್ದ ಶ್ರೀ ಎಸ್.ಸಿ. ಶ್ರೀನಿವಾಸ್‌ರವರು ಮುಂದಿನ ದಿನಗಳಲ್ಲಿ ಕಾರ್ಯದರ್ಶಿಯಾಗಿ ಮುಂದವರೆಯಲಿದ್ದಾರೆ. ನೂತನ ಅಧ್ಯಕ್ಷ – ಕಾರ್ಯದರ್ಶಿಗಳಿಗೆ ಸ್ವಾಗತ ಕೋರುತ್ತ ಶುಭ ಹಾರೈಸುತ್ತೇನೆ.




ಸಂಘಕ್ಕೆ ಅಧ್ಯಕ್ಷನಾಗಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿದ ತಮ್ಮೆಲ್ಲರಿಗೂ ಕೃತಜ್ಞತೆಗಳು. ಸಂಘಕ್ಕೆ ತಮ್ಮೆಲ್ಲರ ಸಹಕಾರ ಹೀಗೆ ಮುಂದುವರೆಯಲೆಂದು ಆಶಿಸುತ್ತೇನೆ.

**ಸೋಮಸುಂದರ**
ಅಧ್ಯಕ್ಷರು

## ಸಂಪಾದಕೀಯ

ಮಾನ್ಯರೇ ನಮಸ್ಕಾರ,

ಬೃಹಚ್ಚರಣ ಪತ್ರಿಕೆಯ ಬಗ್ಗೆ ಮೆಚ್ಚುಗೆ ತಿಳಿಸಿರುವ ನನ್ನ ಆತ್ಮೀಯರೆಲ್ಲರಿಗೆ ವಂದನೆಗಳು. ಸರ್ವ ಸದಸ್ಯರ ಸಭೆಯ ವಿವರಗಳನ್ನು ನೀಡುವ ಸಲುವಾಗಿ ಈ ಬಾರಿಯ ಸಂಚಿಕೆ ವಿಳಂಬವಾಗಿದೆ. ತಮ್ಮ ಸಹಕಾರ ಪತ್ರಿಕೆ ಪ್ರಕಟಣೆಗೆ ಹೀಗೆ ಮುಂದುವರೆಯಲೆಂದು ಬಯಸುತ್ತೇನೆ.




ಬೃಹಚ್ಚರಣ ಪತ್ರಿಕೆಯ ಸಂಪಾದಕ ಮಂಡಳಿಗೆ ಶ್ರೀ ಸೋಮಸುಂದರ ರವರ ಸೇವೆಯನ್ನು ಮುಂದುವರಿಸಲು ಹಾಗೂ ಶ್ರೀ ವಿ.ಎಸ್. ಮಣಿಯವರು ವೈಚಾರಿಕ ಲೇಖನಗಳನ್ನು ಪತ್ರಿಕೆಗೆ ನೀಡಲು ಕೋರುತ್ತೇನೆ.

**ಕೆ.ಸಿ. ನಟರಾಜ್**
ಸಂಪಾದಕ


Email : mmdbs.mag@gmail.com


## 2018–19ರ ಸರ್ವ ಸದಸ್ಯರ ಸಭೆಯ ವಿಶೇಷಾಂಕ




ಬೃಹಚ್ಚರಣ ಸಂಘದ ಮಾನ್ಯ ಸದಸ್ಯರೆಲ್ಲರಿಗೂ ಗೌರವಾದರಪೂರ್ವಕ ನಮಸ್ಕಾರಗಳು.

ಐದು ವರ್ಷಗಳಿಂದ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯನಾಗಿದ್ದು, ಸೇವೆ ಸಲ್ಲಿಸಿರುವ ನನ್ನನ್ನು ಮುಂದಿನ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಬೇಕೆಂದು ಸಂಘದ ಕಾರ್ಯಕಾರಿ ಸಮಿತಿಯು ಕಳೆದ ತಿಂಗಳಿನ ಸಭೆಯಲ್ಲಿ ಆದೇಶ ನೀಡಿರುತ್ತದೆ. ಅದರಂತೆ ಈ ಜವಾಬ್ದಾರಿಯನ್ನು ನಾನು ವಹಿಸಿಕೊಂಡಿರುತ್ತೇನೆ.

ಸಂಘವು ಹತ್ತು ವರ್ಷಗಳಲ್ಲಿ ನಿಮ್ಮೆಲ್ಲರ ಪ್ರೋತ್ಸಾಹ, ಬೆಂಬಲಗಳಿಂದ ಆಡಳಿತ ಮಂಡಳಿಯ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರ ಸಂಘಟಿತ ಸೇವೆಯಿಂದ ಸಂಘವು ಸಾಧಿಸಿರುವ ಬೆಳವಣಿಗೆಯನ್ನೂ, ಉತ್ತಮ ರೀತಿಯ ಆಡಳಿತ ಮತ್ತು ಹಣಕಾಸಿನ ನಿರ್ವಹಣೆಯನ್ನೂ ನೂತನ ಆಡಳಿತ ಮಂಡಳಿಯು ಮಾದರಿಯಾಗಿಟ್ಟುಕೊಂಡು ಮುಂದುವರೆಯುವುದು. ಈ ನಿಟ್ಟಿನಲ್ಲಿ ಹಿಂದಿನ ಆಡಳಿತ ಮಂಡಳಿಯ ಸದಸ್ಯರ ಅನುಭವದ ಪ್ರಯೋಜನ ನಮಗೆ ಲಭ್ಯವಿರುತ್ತದೆ.



ಸಂಘ ನಡೆಸುತ್ತಿರುವ ಕಾರ್ಯಕ್ರಮಗಳಲ್ಲದೇ ಘೋಷಿತ ಉದ್ದೇಶಗಳಿಗೆ ಅನುಗುಣವಾಗಿರುವ ಅನ್ಯ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸುವ ಬಗ್ಗೆ ನಿಮ್ಮೆಲ್ಲರ ಸಹಕಾರ ಅವಶ್ಯಕವಾಗಿದೆ.

ಗೌರವಾದರಪೂರ್ವಕ ನಮಸ್ಕಾರಗಳು.

**ಬಿ. ಸುಬ್ರಹ್ಮಣ್ಯಂ**

ಮಾನ್ಯರೇ,

'ಬೃಹಚ್ಚರಣ' ಸಂಘದ ಕಾರ್ಯಕಾರಿ ಸಮಿತಿಯು ನನ್ನನ್ನು ಸಂಘದ ಕಾರ್ಯದರ್ಶಿಯನ್ನಾಗಿ ಸೇವೆ ಸಲ್ಲಿಸಲು ಸೂಚಿಸಿರುವುದಕ್ಕಾಗಿ ಕೃತಜ್ಞತೆಗಳು.

ಶ್ರೀ ವಿ.ಎಸ್. ಮಣಿಯವರು ಕಾರ್ಯದರ್ಶಿಯಾಗಿ ಸಂಘದ ಏಳಿಗೆಗೆ ಸೇವೆ ಸಲ್ಲಿಸಿರುವುದು ಸ್ಮರಣೀಯ. ಮುಂಬರುವ ದಿನಗಳಲ್ಲಿ ಸಂಘದ ಚಟುವಟಿಕೆಗಳು ಹೆಚ್ಚಲು ನಿಮ್ಮ ಸಹಕಾರ ಸೂಚನೆ ಅಗತ್ಯ. ತಮ್ಮೆಲ್ಲರಿಗೂ ಶುಭವಾಗಲೆಂದು ಆಶಿಸುತ್ತೇನೆ. ವಂದನೆಗಳು.



**ಎಸ್.ಸಿ. ಶ್ರೀನಿವಾಸ್**
ಕಾರ್ಯದರ್ಶಿ

# ಶಂಕರ ಜಯಂತಿ ಸಂಗೀತ ಕಾರ್ಯಕ್ರಮದ ಚಿತ್ರಗಳು











## ಮೈ.ಮಂ.ದ್ರಾ. ಬೃಹಚ್ಚರಣ ಸಂಘ

(ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ)

**ಕಾರ್ಯಕಾರಿ ಸಮಿತಿ**

ಶ್ರೀಯುತರು

ಅಧ್ಯಕ್ಷರು

**ಬಿ. ಸುಬ್ರಹ್ಮಣ್ಯಂ, 9449869667**

ಉಪಾಧ್ಯಕ್ಷರು

**ಎಚ್.ಕೆ. ಶಶಿಧರ್, 9845173766**

ಕಾರ್ಯದರ್ಶಿ

**ಎಸ್.ಸಿ. ಶ್ರೀನಿವಾಸ, 9845376947**

ಸಹಕಾರ್ಯದರ್ಶಿಗಳು

**ಅರುಣ್ ವಿ., 9880166001**

ಖಜಾಂಚಿ

**ಎಸ್. ಸತ್ಯನಾರಾಯಣ, 9980945699**

ಸಹ ಖಜಾಂಚಿ

**ಟಿ.ಪಿ. ಸೂರ್ಯನಾರಾಯಣ, 9945484268**

ಗೌರವ ಸದಸ್ಯರು

**ಎಸ್. ಸೋಮಸುಂದರ, 9900113298**
**ಕೆ.ಜಿ. ವೆಂಕಟೇಶ್, 9964012687**
**ಮಂಜುನಾರಾಯಣ್ ಕೆ. 9886114279**
**ಕೆ. ಗುಂಡಪ್ಪ, 9845332315**
**ಕೆ.ಬಿ.ಎಸ್. ಶರ್ಮ, 94820 87344**
**ಟಿ.ಎಸ್. ರಮೇಶನ್, 9663874531**
**ಸರಸ್ವತಿ ನಟರಾಜನ್, 9480619730**
**ಆರ್. ಗಣೇಶ್ ಶ್ರೀಧರ್, 9880187686**
**ಟಿ. ನಾಗೇಶ್, 9980662118**
**ಶಂಕರಪ್ರಸಾದ್ ಬಿ.ಆರ್., 9845663833**
**ಟಿ.ಎನ್. ರವಿಕಿರಣ್, 9972677005**
**ಅರುಣ್ ಸೇತುರಾಮ್, 9900313929**
**ನಿತಿನ್‌ಭಾಸ್ಕರ್, 9844417333**

ಲೆಕ್ಕಪರಿಶೋಧಕರು

**ಬಿ.ಎನ್.ಜಿ. ಪ್ರಸಾದ್, 9845128229**

**ಗೌರವ ಸಂಪಾದಕ ಮಂಡಳಿ–ಬೃಹಚ್ಚರಣ ಪತ್ರಿಕೆ**

**ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿ**

**ಎಸ್. ಸೋಮಸುಂದರ, 9900113298**
**ಕೆ.ಸಿ. ನಟರಾಜ್, 9845113475**

ಸಂಪಾದಕರು


**ಲಲಿತಾ ರಮೇಶ್, 9945199637**

ಉಪಸಂಪಾದಕಿ

**ಶಿವಕುಮಾರ್ ಎನ್., 6362337254**

ಛಾಯಾಗ್ರಾಹಕ

# ಶಂಕರ ಜಯಂತಿ



ಹಿಂದಿನ ವರ್ಷಗಳಂತೆಯೇ ಈ ಬಾರಿಯೂ ಬೃಹಚ್ಚರಣ ಸಂಘದ ಸದಸ್ಯರು ದಿನಾಂಕ 9.5.2019ರಂದು ಶಂಕರ ಜಯಂತಿಯಂದು ಸಂಗೀತ ಕಾರ್ಯಕ್ರಮವನ್ನು ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆಯಾದ ಶ್ರೀಮತಿ ಸರಸ್ವತಿ ನಟರಾಜನ್‌ರವರ ನೇತೃತ್ವದಲ್ಲಿ ಬಸವನ ಗುಡಿಯ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಆವರಣದಲ್ಲಿ ಸಂಜೆ ನೆರವೇರಿಸಿದರು.

ಸಂಘದ ಸದಸ್ಯರಾದ ಶ್ರೀ ಎಚ್.ಪಿ. ಶ್ರೀನಿವಾಸ್, ಶ್ರೀಮತಿ ಸರ್ವಮಂಗಳಾ, ಶ್ರೀಮತಿ ಆರ್. ರಾಜಲಕ್ಷ್ಮಿ ಮತ್ತು ಶ್ರೀಮತಿ ರಮ್ಯಾ ಪರಮೇಶ್ವರ್‌ರವರ ಗಣೇಶ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ನಂತರ ಚಿ. ಸಮಾಹಿತ ಶಿವಕುಮಾರ್ ಮತ್ತು ಚಿ. ಪ್ರಿಯ ದೇಶಪಾಂಡೆರವರ ಭಕ್ತಿಗೀತೆ ಗಾಯನ ನೆರೆದವರ ಮನದಲ್ಲಿ ಮನೋಲ್ಲಾಸ ನೀಡಿತು. ಚಿ. ಅರ್ಜುನ ದೇಶಪಾಂಡೆಯವರು ಭಕ್ತಿಗೀತೆಗಳನ್ನು ಹಾಡಿದರು. ಸಮೂಹ ಗಾಯನದಲ್ಲಿ ಹಾಡಿದ ಶ್ರೀಮತಿಯರಾದ ಸರಸ್ವತಿ ನಟರಾಜನ್, ಛಾಯಾ ಭಗವಾನ್, ಗಾಯತ್ರಿ ಶೇಷಾಚಲ, ಕೆ.ಎಸ್. ಶಾಂತಾ, ಶುಭಾ ದೇಶಪಾಂಡೆ, ಲಲಿತಾ ರಮೇಶ್, ಕು. ಸುಪ್ರಿಯ, ಕು. ಮನೋಜ್ಞರವರಿಗೆ ಪಕ್ಕವಾದ್ಯದಲ್ಲಿ ಮೃದಂಗ ವಿದ್ವಾನ್ ಶ್ರೀಸರ್ವೋತ್ತಮ, ಘಟದಲ್ಲಿ ವಿದ್ವಾನ್ ಶ್ರೀ ರವಿಶಂಕರ್, ಕೀಬೋರ್ಡ್‌ನಲ್ಲಿ ಶ್ರೀಮತಿ ಶುಭ ಗಾಯತ್ರಿ ಸಾಥ್ ನೀಡಿದರು.

ಕಾರ್ಯಕ್ರಮವನ್ನು ಶ್ರೀ ಆರ್. ರಮೇಶ್‌ರವರು ನಿರೂಪಿಸಿದರು. ಇದೇ ಸಂದರ್ಭದಲ್ಲಿ ಸಂಘವು ಕಲಾವಿದರಿಗೆಲ್ಲಾ ನೆನಪಿನ ಕಾಣಿಕೆಗಳನ್ನು ವಿತರಿಸಿತು. ನಮ್ಮ ಸಂಘದ ಕಲಾವಿದರಿಗೆ ಸತತವಾಗಿ ಅವಕಾಶ ನೀಡುತ್ತಿರುವ ಶಂಕರ ಸೇವಾ ಸಮಿತಿಯವರ ಪದಾಧಿಕಾರಿಗಳಿಗೆ ಸಂಘದ ಅಧ್ಯಕ್ಷರಾದ ಶ್ರೀ ಸೋಮಸುಂದರರವರು ಧನ್ಯವಾದ ಅರ್ಪಿಸಿದರು. ಸಂಗೀತ ಕಾರ್ಯಕ್ರಮವು ಮಹಾಮಂಗಳಾರತಿ, ಪ್ರಸಾದ ಭೋಜನದೊಂದಿಗೆ ಮುಕ್ತಾಯವಾಯಿತು.

ಸಂಘದ ಸಂಗೀತ ಕಲಾವಿದರಿಗೆ ಅವಕಾಶ ನೀಡಿದ ಶಂಕರ ಸಮಿತಿಗೆ ವಿದೂಷಿ ಸರಸ್ವತಿಯವರು ಧನ್ಯವಾದ ಅರ್ಪಿಸಿದರು.

◆ **ಲಲಿತಾ ರಮೇಶ್**
9945199637



# 2018–19ರ ಸರ್ವ ಸದಸ್ಯರ ಸಭೆಯ ಒಂದು ಪಕ್ಷಿನೋಟ

ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘದ 2018–19ರ ಸರ್ವ ಸದಸ್ಯರ ಸಭೆಯು ದಿನಾಂಕ 7.7.2019ರಂದು ಬಸವನಗುಡಿಯ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಆವರಣದಲ್ಲಿರುವ ಶ್ರೀ ಭ್ರಮರಾಂಬಿಕ ಮಂಗಳ ಸದನದಲ್ಲಿ ನಡೆಯಿತು.

ಚಿ। ಅರ್ಜುನ್ ದೇಶಪಾಂಡೆಯವರ ಪ್ರಾರ್ಥನೆ ಯೊಂದಿಗೆ ಪ್ರಾರಂಭವಾದ ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಶ್ರೀ ಸೋಮಸುಂದರರವರು ವಹಿಸಿ, ನೆರೆದ ಸಭಿಕರನ್ನು ಗೌರವಾನ್ವಿತ ಹಿರಿಯ ಚೇತನರನ್ನು, ಪ್ರತಿಭಾ ಪುರಸ್ಕೃತರನ್ನು 'ಬೃಹಚ್ಚರಣ' ಭಾಷೆಯಲ್ಲಿ ಸ್ವಾಗತಿಸಿ, ಸಂಘವು ಬೆಳೆದು ಬಂದ ರೀತಿಯನ್ನು ವಿವರಿಸಿದರು.

ಸಂಘದ ಉಪಾಧ್ಯಕ್ಷರಾದ ಶ್ರೀ ಹೆಚ್.ಕೆ. ಶಶಿಧರ್‌ರವರು ಈ ವರ್ಷದಲ್ಲಿ ನಮ್ಮನ್ನಗಲಿದ ನಮ್ಮವರ ಹೆಸರುಗಳನ್ನು ಸ್ಮರಿಸಿದರು. ಸಭೆಯಲ್ಲಿ ಸರ್ವರೂ ಒಂದು ನಿಮಿಷದ ಮೌನ ಆಚರಿಸುವ ಮೂಲಕ ಗೌರವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

ಸಂಘದ ಕಾರ್ಯದರ್ಶಿಗಳಾದ ಶ್ರೀ ವಿ.ಎಸ್. ಮಣಿ ಯವರು ಹಿಂದಿನ ವರ್ಷದಲ್ಲಿ ನಡೆದ ಸಂಘದ ಕಾರ್ಯ ಚಟುವಟಿಕೆಗಳನ್ನು ವಿವರಿಸುತ್ತಾ, ನಾಗಾರಾಧನೆ, ಶಂಕರ ಜಯಂತಿ, ಕ್ಯಾಲೆಂಡರ್ ಬಿಡುಗಡೆ, ಸತ್ಯಗಾಲ ಮತ್ತು ಇನ್ನಿತರ ಸ್ಥಳಗಳಿಗೆ ಒಂದು ದಿನದ ಪ್ರವಾಸ, ಇವುಗಳನ್ನು ಪ್ರಾಸ್ತಾವಿಕ ನುಡಿಯಲ್ಲಿ ತಿಳಿಸುತ್ತಾ, ರಾಮಾಯಣದ ಹನುಮಂತನನ್ನು ಉದಾಹರಿಸಿ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರು ಸಂಘದ ಬೆಳವಣಿಗೆಗಾಗಿ ನಿಸ್ವಾರ್ಥ ಸೇವೆ ಮಾಡುತ್ತಿದ್ದಾರೆ ಎಂದರು. ಸಂಘ ಬೆಳೆಯಲು ಸದಸ್ಯರ ಸಂಖ್ಯೆ ಹೆಚ್ಚಾಗ ಬೇಕೆಂದು ಬಯಸಿದರು. ಪ್ರಾರಂಭದಲ್ಲಿ 50ಕ್ಕಿಂತ ಕಡಿಮೆ ಇದ್ದ ಸದಸ್ಯರ ಸಂಖ್ಯೆ ಈಗ 500ಕ್ಕೆ ಹೆಚ್ಚಿದ್ದು ಮುಂದೆ 1000 ವಾಗಲಿ ಎಂದು ಆಶಿಸಿದರು. ಇದೇ ಸಂದರ್ಭದಲ್ಲಿ ಕಾರ್ಯದರ್ಶಿಗಳು ತಾವು ನಿವೃತ್ತಿಯಾಗುತ್ತಿರುವ ವಿಷಯ ತಿಳಿಸಿ ಮುಂದಿನ ಹೊಸ ಕಾರ್ಯಕಾರಿ ಸಮಿತಿಗೆ ಸರ್ವ ಸದಸ್ಯರು ಸಹಕರಿಸುತ್ತೀರೆಂದು ನಂಬಿದ್ದೇನೆ ಎಂದು ವಂದಿಸಿ ಧನ್ಯವಾದ ತಿಳಿಸಿದರು.

ಸಂಘದ ಖಜಾಂಚಿಗಳಾದ ಶ್ರೀ ಎಸ್. ಸತ್ಯನಾರಾಯಣ್ ರವರು 2018–19ರ ಲೆಕ್ಕ ಪರಿಶೋಧಕರಿಂದ ದೃಢೀಕರಿಸಲ್ಪಟ್ಟ ಆಯ–ವ್ಯಯ ಪತ್ರ ಮಂಡಿಸಿದರು. ಸಂಘದ ಸದಸ್ಯರು ಕೈ ಎತ್ತುವ ಮೂಲಕ ಸರ್ವಾನುಮತದಿಂದ ಅನುಮೋದಿಸಿದರು.

ಹಿರಿಯ ಸದಸ್ಯರಾದ ಶ್ರೀಯುತರಾದ ಸೇತೂರಾಂ, ಹೆಚ್.ಪಿ. ಶ್ರೀನಿವಾಸ್, ಆರ್. ರಮೇಶ್, ಸರ್ಜಾಪುರದ ಗೋಪಾಲಸ್ವಾಮಿ ಮತ್ತು ಶ್ರೀಮತಿ ಅಂಜನಿ ನಂದಕುಮಾರ್ ರವರು ಸಂಘದ ಚಟುವಟಿಕೆಗಳನ್ನು ಶ್ಲಾಘಿಸಿ ಕೆಲವು ಸೂಚನೆ ಗಳನ್ನು ನೀಡಿದರು. ಇದಕ್ಕೆ ಅಧ್ಯಕ್ಷರು ಪ್ರತಿಕ್ರಿಯಿಸುತ್ತಾ ಸಂಘ ಬೆಳೆಯಬೇಕೆಂದು, ಸದಸ್ಯರು ಹೆಚ್ಚಬೇಕೆಂದು ಹಾಗೂ ಹಿರಿಯ ಸದಸ್ಯರು ಸೂಚಿಸಿರುವ ಸಲಹೆಗಳನ್ನು ಕಾರ್ಯರೂಪಕ್ಕೆ ತರುತ್ತೇವೆಂದು ತಿಳಿಸಿದರು.

## 75 ವಸಂತಗಳನ್ನು ಪೂರೈಸಿರುವ ಹಿರಿಯ ಚೇತನರಿಗೆ ಸನ್ಮಾನ

* **ಶ್ರೀಮತಿ ರಾಜಮ್ಮ** ದಿ.ಎಸ್. ಶ್ರೀಕಂಠೇಶ್ವರ ಅಯ್ಯರ್, ದಿ. ಜಯಮ್ಮ ದಂಪತಿಗಳ ಪುತ್ರಿ ಹಾಗೂ ದಿ. ಟಿ. ನಾರಾಯಣ ಸ್ವಾಮಿಯವರ ಪತ್ನಿ.

* **ಶ್ರೀಮತಿ ಎಸ್.ಕೆ. ಸ್ವರ್ಣಾ**ರವರು ದಿ. ಸರ್ಜಾಪುರ, ವಿ. ಕೃಷ್ಣಮೂರ್ತಿ ದಿ. ಜಯಮ್ಮನವರ ಪುತ್ರಿ ಹಾಗೂ ದಿ. ಅನಂತಪದ್ಮನಾಭ ರವರ ಪತ್ನಿ.

* **ಶ್ರೀಮತಿ ಎಸ್. ಆರ್. ಸುಬ್ಬಲಕ್ಷ್ಮಿ**ಯವರು ದಿ. ರಾಮಯ್ಯ, ದಿ. ಕಮಲಮ್ಮನವರ ಪುತ್ರಿ ಹಾಗೂ ಸರ್ಜಾಪುರ ಗೋಪಾಲ ಸ್ವಾಮಿಯವರ ಪತ್ನಿ.

* **ಶ್ರೀಮತಿ ಪಾರ್ವತೀದೇವಿ**ಯವರು ದಿ.ಎಸ್.ಆರ್. ವೆಂಕಟೇಶ್ವರನ್, ದಿ. ಶಾರದಮ್ಮನವರ ಪುತ್ರಿ.

* **ಶ್ರೀಮತಿ ರತ್ನಾ ಸತ್ಯಮೂರ್ತಿ**ಯವರು ದಿ. ಬೂದಿಗೆರೆ ಸುಬ್ಬರಾವ್, ದಿ. ಸಣ್ಣೆ ಜಾನಕಮ್ಮನವರ ಪುತ್ರಿ ಹಾಗೂ ಶ್ರೀ ಜಿ.ಎಸ್. ಸತ್ಯಮೂರ್ತಿಯವರ ಪತ್ನಿ.

* **ಶ್ರೀ ಕೆ.ಸಿ. ನಟರಾಜನ್**ರವರು ದಿ. ಕಾಚರಕನಹಳ್ಳಿ ಛಾಯಾಪತಿ, ದಿ. ವರಲಕ್ಷ್ಮಿಯವರ ಪುತ್ರ ಹಾಗೂ ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಸರಸ್ವತಿಯವರ ಪತಿ.

ಹಿರಿಯರನ್ನು, ಶಾಲು–ಹಾರ ಮತ್ತು ನೆನಪಿನ ಕಾಣಿಕೆಯನ್ನೂ ನೀಡಿ ಗೌರವಿಸಲಾಯಿತು.

## ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳು

* **ಎಸ್.ಎಸ್.ಎಲ್.ಸಿ.** ವಿಭಾಗದಲ್ಲಿ ಸುಪ್ರಿಯಾ ಶ್ರೀಧರ್, ಶ್ರೇಯಾ ಕಶ್ಯಪ್, ಶ್ರೇಯಸ್ ವಾಸು, ನಂದನ್ ಜಂಬುನಾಥ, ಭಾವನೆ ಪಾರ್ಥಸಾರಥಿ, ಸಿದ್ಧಾರ್ಥ ಶ್ರೀನಿವಾಸ್, ಸಮರ್ಥ್ ಶ್ರೀನಿವಾಸ್, ಧ್ರುವ ಶ್ರೀಕಾಂತ್, ರಕ್ಷಾ ಉಮಾಶಂಕರ್, ವೈಷ್ಣವಿ ಪ್ರವೀಣ್.

* **ಪಿ.ಯು.**ಸಿ. ವಿಭಾಗದಲ್ಲಿ ಅಪೇಕ್ಷ ಕೃಷ್ಣ, ಸುರಭಿ ಶ್ರೀನಿವಾಸ್, ಅಜೇಯ್ ಕೃಷ್ಣ ಶ್ರೀಕಾಂತ್, ನಿಶ್ಚಿತ್ ಶಿವಕುಮಾರ್, ಕರುಣಾ ಬದರೀನಾಥ್, ಶ್ರೀನಿಧಿ ಶ್ರೀನಿವಾಸ ರಾವ್, ಸಾಯಿಕಿರಣ್ ಪದ್ಮನಾಭ್, ಸೂರಜ್ ಅರುಣ್, ನಾಗಲಕ್ಷ್ಮಿ ಜಂಬುನಾಥ್, ಶ್ರದ್ಧಾ ನಾಗಭೂಷಣ್, ಚೈತ್ರಾ ಕಿಶೋರ್, ಯಶಸ್ವಿನಿ ದ್ವಾರಕಾನಾಥ, ಕೌಸ್ತುಭ ವಿಶ್ವನಾಥ್.

* **ಪದವಿ** ವಿಭಾಗದಲ್ಲಿ ವಿನಯ್‌ಕುಮಾರ್ ರಾಮಕೃಷ್ಣ (MBA), ವಾಣಿಶ್ರೀ ರಾಮಕೃಷ್ಣ (ಸೀನಿಯರ್ ಸಂಗೀತ ಪರೀಕ್ಷೆ), ಪ್ರಣವ ಶರ್ಮ ಮುರಳಿ (BSc), ಸಾಯಿಸಿಂಧೂರ ಕುಮಾರ್ (BSc, Biology) ತೇಜಸ್ವಿನಿ ದ್ವಾರಕಾನಾಥ್ (B.Com), ಡಾ. ಮೇಘನಾ ನಾರಾಯಣ್ (MBBS), ಸಚಿನ್ ಕುಮಾರ್ ಬಾಲಸುಬ್ರಹ್ಮಣ್ಯ (Computer Science, Masters).

ಪ್ರತಿಭಾ ವಿದ್ಯಾರ್ಥಿಗಳಿಗೆ ಒಂದು ಸಾವಿರ ರೂ.ಗಳ ಗಿಫ್ಟ್‌ವೋಚರ್, ನೆನಪಿನ ಕಾಣಿಕೆ, ಪ್ರಶಸ್ತಿ ಪತ್ರ ನೀಡಿ ಶುಭ ಕೋರಲಾಯಿತು.

ಇದೇ ಸಂದರ್ಭದಲ್ಲಿ ಕಾರ್ಯಕಾರಿ ಸಮಿತಿ ಸೂಚಿಸಿದಂತೆ ನೂತನವಾಗಿ ಸರ್ವಾನುಮತದಿಂದ ಸಂಘದ ಅಧ್ಯಕ್ಷರಾಗಿ ಶ್ರೀ ಸುಬ್ರಹ್ಮಣ್ಯಂ ಬೆಂಗಳೂರು, ಕಾರ್ಯದರ್ಶಿಯಾಗಿ ಎಸ್.ಸಿ. ಶ್ರೀನಿವಾಸ್, ಶ್ರೀ ಟಿ.ಪಿ. ಸೂರ್ಯ ನಾರಾಯಣರವರನ್ನು ಸಹಖಜಾಂಚಿಯಾಗಿ ಅಧ್ಯಕ್ಷ ಸೋಮಸುಂದರರವರು ಪರಿಚಯಿಸಿದರು.

ಅಧ್ಯಕ್ಷರಾಗಿ ಹುದ್ದೆ ವಹಿಸಿಕೊಂಡ ಶ್ರೀ ಬೆಂಗಳೂರು ಸುಬ್ರಹ್ಮಣ್ಯಂರವರು ಈವರೆಗಿನ ಸಂಘದ ಏಳಿಗೆಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಅಧ್ಯಕ್ಷ ಶ್ರೀ ಸೋಮಸುಂದರ ಹಾಗೂ ಕಾರ್ಯದರ್ಶಿ ವಿ.ಎಸ್. ಮಣಿಯವರ ಸೇವೆಯನ್ನು ಸ್ಮರಿಸಿ ಸಂಘದ ಮುಂದಿನ ಕಾರ್ಯ ಚಟುವಟಿಕೆಗಳಿಗೆ ಎಲ್ಲಾ ಸದಸ್ಯರ ಸಹಕಾರ ಕೋರಿದರು. ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ರವಿಕಿರಣ್‌ರವರು ಕಾರ್ಯಕ್ರಮ ನಿರೂಪಿಸಿ, ಕಾರ್ಯಕ್ರಮ ನಡೆಸಲು ಸಹಕರಿಸಿದ ಸರ್ವರಿಗೂ ಧನ್ಯವಾದ ಪೂರ್ವಕ ವಂದನೆ ತಿಳಿಸಿದರು. ಸರ್ವ ಸದಸ್ಯರ ಸಭೆಯು ಮೃಷ್ಟಾನ್ನ ಭೋಜನದೊಂದಿಗೆ ಕೊನೆಗೊಂಡಿತು.



◆ **ಲಲತಾ ರಮೇಶ್**
9945199637





**ಅಭಿನಂದನೆ**

* **ಶ್ರೀಮತಿ ಸುಷ್ಮಾ ರಘುನಂದನ್**ರವರು "19ನೇ ಶತಮಾನದ ಅನುವಾದಿತ ಕನ್ನಡ ನಾಟಕಗಳು. ಸಾಂಸ್ಕೃತಿಕ ಮುಖಾಮುಖಿ ಹಾಗೂ ಅನುಸಂಧಾನ" ಎಂಬ ವಿಷಯದಲ್ಲಿ ಡಾ. ವೆಂಕಟೇಶಮೂರ್ತಿಯವರ ಮಾರ್ಗದರ್ಶನದಲ್ಲಿ ಹಂಪಿ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿರುತ್ತಾರೆ.

* ಸಂಘದ ಸದಸ್ಯ ಕರ್ನಾಟಕ ಸರ್ಕಾರದ ದಂತ ವೈದ್ಯಕೀಯ ಕಾಲೇಜಿನ ಅಸೋಸಿಯೇಟ್ ಪ್ರೊಫೆಸರ್ **ಡಾ. ಸಿ.ಎನ್. ಗುರುಪ್ರಸಾದ್**ರವರು PERIODONTOLOGY ಯಲ್ಲಿ ಪಿಎಚ್.ಡಿ. ಪದವಿಯನ್ನು ಪ್ರೊ. ಡಾ.ಕೆ.ಆರ್. ಪ್ರದೀಪ್‌ರವರ ಮಾರ್ಗದರ್ಶನದಲ್ಲಿ ಪಡೆದಿರುತ್ತಾರೆ.

**ಶ್ರೀಮತಿ ಸುಷ್ಮಾ ರಘುನಂದನ್ ಹಾಗೂ ಡಾ. ಗುರುಪ್ರಸಾದ್‌ರವರನ್ನು ಸಂಘವು ಅಭಿನಂದಿಸುತ್ತದೆ.**

* * *

``HAL ತೇಜಸ್ ಕನ್ನಡ ಸಂಘದಿಂದ" ಪ್ರಕಟಣೆಗೊಂಡಿರುವ 'ವಿಮಾನಮಾನ' ಪುಸ್ತಕದಲ್ಲಿ HAL ನಲ್ಲಿ ಸೇವೆ ಸಲ್ಲಿಸಿರುವ ಹಿರಿಯರಾದ ಕಲಾ ಪೋಷಕರನ್ನು ಗುರುತಿಸಿ ಪರಿಚಯಿಸುವ ಲೇಖನಗಳಿದ್ದು ನಮ್ಮ ಸಂಘದ ಹಿರಿಯ ಸದಸ್ಯ ಶ್ರೀ ಜಿ.ಎಸ್. ಸತ್ಯಮೂರ್ತಿಯವರ ಪರಿಚಯವೂ ಒಳಗೊಂಡಿರುವುದು ಹೆಮ್ಮೆಯ ವಿಷಯ. ಶ್ರೀಯುತರಿಗೆ ಸಂಘದ ಅಭಿನಂದನೆ.

# ಸರ್ವ ಸದಸ್ಯರ ಸಭೆ–2019

ಪ್ರತಿ ವರ್ಷದಂತೆ 2018–19ನೇ ಸಾಲಿನ ಸರ್ವ ಸದಸ್ಯರ ಸಭೆಯು ತಾ 7–07–2019 ರಂದು ಅಚ್ಚುಕಟ್ಟಾಗಿ, ವ್ಯವಸ್ಥಿತವಾಗಿ ಏರ್ಪಡಿಸಲಾಗಿತ್ತು.

ಕಳೆದ ಏಳೆಂಟು ವರ್ಷಗಳಿಂದ, ಸಂಘವು ಯಾವುದೇ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗಲೂ ಎಲ್ಲ ರೀತಿಯಲ್ಲೂ ಉತ್ತಮವಾಗಿ ಆಯೋಜಿಸಬೇಕೆಂಬ ಇಚ್ಛೆ, ಆಸಕ್ತಿ, ಉತ್ಸಾಹ ಪ್ರತಿಯೊಬ್ಬ ಕಾರ್ಯಕಾರಿ ಸಮಿತಿಯ ಸದಸ್ಯರಲ್ಲಿ ಕಾಣುವುದು ಮೆಚ್ಚುವಂತಹುದ್ದು.

**ಪ್ರತಿಭಾ ಪುರಸ್ಕಾರ.**

ನಮ್ಮ ಸಮುದಾಯದ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣ ರಾಗುತ್ತಿರುವುದು ಅವರ ಕುಟುಂಬ ಮತ್ತು ಸಮುದಾಯ ದವರಿಗೆ ಹೆಮ್ಮೆ ತರುವ ವಿಷಯ.

ಈ ಎಲ್ಲ ಸಂತೋಷದ ನಡುವೆಯೂ ನಾನು ಗಮನಿಸಿದ ವಿಷಯ ಸ್ವಲ್ಪಮಟ್ಟಿಗೆ ಮನಸ್ಸಿಗೆ ಕಳವಳ ಉಂಟುಮಾಡುವ ವಿಚಾರ. ಪ್ರತಿವರ್ಷದಂತೆ ಈ ವರ್ಷವೂ ಹಿರಿಯ ಚೇತನರಿಗೆ ಸನ್ಮಾನ ಮಾಡುವ ಸಂದರ್ಭವನ್ನು ಗಮನಿಸಿದಾಗ ಏನನ್ನೋ ಕಳೆದುಕೊಳ್ಳುತ್ತಿರುವ ಅನುಭವದ ಜೊತೆಗೆ ಮನಸ್ಸಿಗೆ ಬೇಸರವೂ ಉಂಟಾಯಿತು. ಪ್ರತಿವರ್ಷವೂ, ಸಾಲು ಸಾಲುಗಳಲ್ಲಿ ಅನೇಕ ಹಿರಿಯ ಚೇತನರಿಗೆ ಸನ್ಮಾನ ಮಾಡುವಾಗ ಬಹಳ ಹೆಮ್ಮೆ ಎನಿಸುತ್ತಿತ್ತು, ಅದೊಂದು ಅದ್ಭುತವಾದ ಸಂಧರ್ಭ.

ಆದರೆ ಪ್ರತಿವರ್ಷ ಹಿರಿಯ ಚೇತನರ ಸಂಖ್ಯೆಯಲ್ಲಿ ಇಳಿಮುಖವಾಗುತ್ತಿರುವುದು ಸಮುದಾಯದ ಪ್ರತಿಯೊಬ್ಬರಿಗೂ ನೋವು ತರುವ ವಿಷಯ.

ಈ ವರ್ಷದಲ್ಲಿ ಕೇವಲ ಐವರು ಮಹಿಳೆಯರು ಮತ್ತು ಪುರುಷರಲ್ಲಿ ನಮ್ಮೆಲ್ಲ ಪ್ರೀತಿಗೆ ಪಾತ್ರರಾದವರು ಶ್ರೀಯುತ ಕೆ.ಸಿ.ನಟರಾಜ್‌ರವರು ಮಾತ್ರ. ನಮ್ಮನ್ನು ಅಗಲಿದ ಸಮುದಾಯದ ಹಿರಿಯರ ಸಂಖ್ಯೆ ಸುಮಾರು ಮುವತ್ತು ಮಂದಿ.

ನಮಗೆಲ್ಲ ತಿಳಿದ ಹಾಗೆ ಅದು ಮಹಾಭಾರತದ ಯುದ್ಧದ ಸಂದರ್ಭ. ಅರ್ಜುನ ಶೋಕದಲ್ಲಿ ಮುಳುಗಿದ್ದಾನೆ. ಶ್ರೀಕೃಷ್ಣ ಭಗವದ್ಗೀತೆಯ ಈ ಶ್ಲೋಕದ ಮೂಲಕ ಅರ್ಜುನನ್ನು ಕುರಿತು ಹೇಳಿದ್ದು. **"ಜಾತಸ್ಯ ಮರಣಂ ಧೃವಂ, ಧೃವಂ ಜನ್ಮಂ ಮೃತಸ್ಯ ಚ"** ಎನ್ನುತ್ತಾನೆ.

ಜಗತ್ತಿನ ಮನುಷ್ಯರಷ್ಟೇ ಅಲ್ಲ, ಪ್ರಾಣಿ, ಪಕ್ಷಿ, ಕೀಟ, ಸರೀಸೃಪಗಳು, ಗಿಡ ಮರಗಳು ಎಲ್ಲಕ್ಕೂ ಒಂದು ನಿಗಧಿತ ಅವಧಿಗೆ ಮಾತ್ರವೇ ಬದುಕು, ಜೀವನದ ಯಾತ್ರೆ.

ಜನನ ಮರಣಗಳು ಆ ಭಗವಂತನ ಆಣತಿಯಂತೆಯೇ ನಡೆಯುವುದು, ಇಲ್ಲಿ ಮಾನವರಾದ ನಮ್ಮ ಪಾತ್ರ ಶೂನ್ಯ.

ಎಲ್ಲವೂ ನಮಗೆ ತಿಳಿದಿದ್ದಾದರೂ, ನಮ್ಮ ಸಮುದಾಯದ ಹಿರಿಯ ಚೇತನರ ಸಂಖ್ಯೆ ಕ್ಷೀಣಿಸುತ್ತಿವುದು ಕಳವಳಕಾರಿಯಾದ ಸಂಗತಿ. ಮುಂಬರುವ ವರ್ಷಗಳಲ್ಲಿ ನಮ್ಮೆಲ್ಲರ ಪ್ರಾರ್ಥನೆಯೊಂದಿಗೆ ಭಗವಂತ ಎಲ್ಲರಿಗೂ ಹೆಚ್ಚಿನ ಆಯಸ್ಸು, ಆರೋಗ್ಯ ಕರುಣಿಸಲಿ. ಮುಂದಿನ ದಿನಗಳಲ್ಲಿ ನಮ್ಮ ಸಂಘದ ವತಿಯಿಂದ ಹೆಚ್ಚು ಹೆಚ್ಚಿನ ಸಂಖ್ಯೆಯಲ್ಲಿ ಹಿರಿಯ ಚೇತನರಿಗೆ ಸನ್ಮಾನ ಮಾಡುವ ಸಂಧರ್ಭ ಒದಗಿ ಬರಲಿ ಎಂಬ ಪ್ರಾರ್ಥನೆಯೊಂದಿಗೆ.

ಧನ್ಯವಾದಗಳು.



◆ **ವಿ.ಎಸ್.ಮಣಿ**
**9845055582**

## ಮೆಲಕು – ಫಲಕು

ವಿಕಾರಿನಾಮ ಸಂವತ್ಸರದ ಗ್ರೀಷ್ಮಋತು
ಆಷಾಢ ರವಿವಾರದಲಿ ಮಲ್ಲಿಕಾರ್ಜುನನ ಸನ್ನಿಧಿ
ಮಂಜಾಪುತ್ತೂರಿನ ಬೃಹಚ್ಚರಣ ಸಮ್ಮಿಚಿತ

ನಡೆದ ಈ ಸಮಾವೇಶ ನೆರೆದ
ಹರಿಯಿತು ಭಾವನೆಗಳ ಆನಂದದ ಪನ್ನೀರು
ಪನ್ನೀರ ಸಿಂಚನ ಕಾರ್ಯಕರ್ತರುಗಳು ನಿರ್ವಹಿಸಿ
ರೀತಿನೀತಿಗಳು ನಿಜಕ್ಕೂ ಸುಂದರ ಚೊಕ್ಕ ಅನುಭವ
ಓಲಗದಿ ಸಂದ ಹಿರಿಯ ಚೇತನರಿಗೆ ದೊರೆತ
ಅಭಿಮಾನದ ಪುರಸ್ಕಾರ ನಮನಪೂರಕ
ಅಂತೆಯೆ ವಿವಿಧ ಹಂತಗಳಲ್ಲಿ
ವಿದ್ಯಾರ್ಥಿಗಲ ದೊರೆತ ಉತ್ತೇಜನ ಪೂರಕ
ಅವರುಗಳ ಹೆಚ್ಚಿನ ಓದಿಗೆ ದೊರೆತ ಅಮ್ಮ
ಇದರಿಂ ಅವರುಗಳ ಪಾಂಡಿತ್ಯದ ಅರಿವು
ಇಮ್ಮಡಿಯಾಗಮ ಸಂಸ್ಥೆ ಮಾಡಿದ
ನಿಜಕ್ಕೂ ಅಚ್ಚಿನೊಳಗೆ ಮೆಚ್ಚು ಈ ಮೆಚ್ಚಿದ
ಸಂಸ್ಥೆಯು ಇನ್ನಷ್ಟು ಯೋಜನೆಗಳಿಗೆ
ಶ್ರೀರಸ್ತು – ಶುಭಮಸ್ತು



◆ **ಜಿ.ಎಸ್. ಸತ್ಯಮೂರ್ತಿ**

ನಮ್ಮವರು

# ಶ್ರೀ ಸರ್ಜಾಪುರ ವೆಂಕಟಾಚಲಪತಿ



ಶ್ರೀ ವೆಂಕಟಾಚಲಪತಿಗಳು 1911 ರಲ್ಲಿ ಜನಿಸಿದರು. ತಂದೆ ಶ್ರೀ ಗೋಪಾಲ ರಾಯರು, ತಾಯಿ ಶ್ರೀಮತಿ ಸುಬ್ಬಮ್ಮ ನವರು. ಇವರ ಒಡಹುಟ್ಟಿದವರು ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ಇವರು ಬೆಂಗಳೂರಿನಲ್ಲಿ ಕಲಾ ವಿಭಾಗದಲ್ಲಿ ಪದವಿ ಪಡೆದರು. ಶ್ರೀಯುತರ ಪತ್ನಿ ಶ್ರೀಮತಿ ಸರೋಜಮ್ಮನವರು. ಈ ದಂಪತಿಗಳಿಗೆ ಒಬ್ಬ ಗಂಡು ಮಗ ಮತ್ತು ಎರಡು ಹೆಣ್ಣು ಮಕ್ಕಳು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸುಮಾರು 1947–48ರಲ್ಲಿ ಬಿ.ಎಂ.ಶ್ರೀ. ಅಚ್ಚುಕೂಟದ ಮುದ್ರಣಾಲಯದಲ್ಲಿ ಶ್ರೀಯುತರು ಕಾರ್ಯನಿರ್ವಹಿಸುತ್ತಿದ್ದರು. ಒಮ್ಮೆ ಅಲ್ಲಿನ ಬಹಿರಂಗ ಸಭೆಯಲ್ಲಿ ನಮ್ಮ ಸಮುದಾಯದವರೇ ಆದ ಡಿ.ವಿ.ಜಿ.ಯವರು ಗೋಖಲೆ ಸಂಸ್ಥೆಯ ಪ್ರಾರಂಭದ ವಿಷಯವನ್ನು ಪ್ರಸ್ತಾಪಿಸಿ, ಆಸಕ್ತರು ಸೇರಬಹುದು ಎಂದು ಹೇಳಿದರು. ಆಗಿನಿಂದಲೇ ವೆಂಕಟಾಚಲಪತಿಗಳು ಗೋಖಲೆ ಸಂಸ್ಥೆಯನ್ನು ಸೇರಿ, ಡಿ.ವಿ.ಜಿ.ಯವರ ಬಲಗೈಯಾದರು.

ಡಿ.ವಿ.ಜಿಯವರ ಸಾಹಿತ್ಯ ಕೃಷಿಗೆ ಸಹಾಯಕರಾಗಿ, ಅವರ ಉಕ್ತಲೇಖನಗಳನ್ನು ಬರೆದುಕೊಳ್ಳುತ್ತಿದ್ದರು. ಅದಲ್ಲದೆ ನವೋದಯ ಸಾಹಿತಿಗಳಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶ್ರೀ ವಿ. ಸೀತಾರಾಮಯ್ಯ ಮತ್ತು ಶ್ರೀ ಜಿ.ಪಿ. ರಾಜರತ್ನಂರವರ ಬಳಕೆ, ಸಹವಾಸವೂ ಶ್ರೀಯುತರಿಗೆ ಇತ್ತು. ಕೆಲವು ಸಾಹಿತಿಗಳಿಗೆ ಬರವಣಿಗೆಯಲ್ಲಿ ಸಹಕರಿಸುತ್ತಿದ್ದರು. 1949ರಿಂದ 1956ರವರೆಗೆ ಡಿ.ವಿ.ಜಿ. ಯವರ ಪೂರ್ಣಾವಧಿ ಸಹಾಯಕರಾಗಿ ಜವಾಬ್ದಾರಿಯುತ ಕಾರ್ಯವನ್ನು ನಿಸ್ವಾರ್ಥಯುತವಾಗಿ ನಿರ್ವಹಿಸುತ್ತಿದ್ದರು.

ಶ್ರೀ ವೆಂಕಟಾಚಲಪತಿಗಳಿಗೆ ಸಾಹಿತ್ಯ, ಬರವಣಿಗೆಗಳಲ್ಲಿ ತೀವ್ರ ಆಸಕ್ತಿ ಇತ್ತು. ಸ್ವಾಧ್ಯಾಯವನ್ನು ರೂಢಿಸಿಕೊಂಡು ಅದನ್ನು ಪ್ರವೃತ್ತಿಯಾಗಿಸಿಕೊಂಡವರು. ಸಂಸ್ಕೃತ, ಕನ್ನಡ, ಇಂಗ್ಲೀಷ್, ತಮಿಳು ಮತ್ತು ತೆಲುಗು ಭಾಷೆಗಳನ್ನು ಅರಿತವರಾಗಿದ್ದರು. ಶ್ರೀ ವೆಂಕಟಾಚಲಪತಿಗಳ ರಚನೆಯಲ್ಲಿ ಮೂಡಿಬಂದಿರುವ ಕೆಲವು ಪುಸ್ತಕಗಳನ್ನು ಹೆಸರಿಸುವುದಾದರೆ, ಶ್ರೀ ಜಯಚಾಮ ರಾಜೇಂದ್ರ ಒಡೆಯರ್ ಅವರ ಸಂಸ್ಕೃತದ "ದತ್ತಾತ್ರೇಯ," ಶ್ರೀ ಮಾಧವ ಪಂಡಿತರ ತಮಿಳಿನ "ಉಮಾಸಹಸ್ರ ಕಾವ್ಯಸಂಗ್ರಹ"ಗಳನ್ನು ಅನುವಾದಿಸಿದ್ದಾರೆ. ಇದಲ್ಲದೆ, ಆದಿತ್ಯ ಹೃದಯ, ನಾರಾಯಣೀಯಂ ಭಾಷ್ಯ ಮತ್ತು ರತ್ನವಾಣಿ ಎಂಬ ಪುಸ್ತಕಗಳನ್ನು ಬರೆದಿದ್ದಾರೆ. ಆಂಗ್ಲ ಭಾಷೆಯಿಂದ ಕ್ರಿಸ್ಟಫರ್ ಈಷರ್ ವುಡ್‌ರವರ "ರಾಮಕೃಷ್ಣ ಅಂಡ್ ಹಿಸ್ ಡಿಸೈಪಲ್ಸ್" ಎಂಬ ಪುಸ್ತಕವನ್ನು "ರಾಮಕೃಷ್ಣ ಮತ್ತು ಅವರ ಶಿಷ್ಯರು" ಎಂದೂ ಮತ್ತು ಸ್ಕಾಟ್ ನಿಯರಿಂಗ್ ರವರ "ಫ್ರೀಡಂ: ಪ್ರಾಮಿಸ್ ಅಂಡ್ ಮೆನೇಸ್" ಎಂಬ ಪುಸ್ತಕವನ್ನು "ಸ್ವಾತಂತ್ರ್ಯ ಮೀಮಾಂಸೆ" ಎಂದೂ ಅನುವಾದ ಮಾಡಿದ್ದಾರೆ. ತಮ್ಮ ಪುಸ್ತಕಗಳು ಮುದ್ರಣಕ್ಕೆ ಹೋಗುವ ಮುನ್ನ ಸ್ವತಃ ತಾವೇ ತಿದ್ದುಪಡಿ ಮಾಡುತ್ತಿದ್ದರು.

"ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ ಲೋಕ ಸಂಗ್ರಹ ಮೇವಾಪಿ ಸಂಪಶ್ಯನ್ಕರ್ತುಮರ್ಹಸಿ" ಎಂಬ ಶ್ರೀಮದ್ಭಗವದ್ಗೀತೆಯ ಮೂರನೆ ಅಧ್ಯಾಯದ 20ನೆಯ ಶ್ಲೋಕದಲ್ಲಿ ತಿಳಿಸಿರುವಂತೆ ಪ್ರಪಂಚದಲ್ಲಿ ಕೆಲವು ವ್ಯಕ್ತಿಗಳು ಸಂಸಾರದಲ್ಲಿ ಅನಾಸಕ್ತಿಯಾಗಿದ್ದುಕೊಂಡು ಸರ್ವರಿಗೂ ಸದುಪಯೋಗವಾಗಲೆಂದು ಬದುಕಿ ಜೀವನ ಸಾರ್ಥಕ ಪಡಿಸಿಕೊಳ್ಳುತ್ತಾರೆ. ಇಂತಹವರಲ್ಲಿ ಸರ್ಜಾಪುರ ವೆಂಕಟಾಚಲ ಪತಿಗಳು ನಮ್ಮವರಲ್ಲಿ ಒಬ್ಬರು ಎಂದು ತಿಳಿಸಲು ಹೆಮ್ಮೆ ಯಾಗುತ್ತದೆ. ಶ್ರೀಯುತರು ತಮ್ಮ 85ನೆಯ ವಯಸ್ಸಿನಲ್ಲಿ 1996ರಲ್ಲಿ ಇಹಲೋಕವನ್ನು ತ್ಯಜಿಸಿದರು. ಈ ವಿಷಯಗಳ ಮಾಹಿತಿಯನ್ನು ನೀಡಿ ಸಹಕರಿಸಿದ ಗೋಖಲೆ ಸಂಸ್ಥೆಯ ಶ್ರೀ ಎಸ್.ಆರ್. ರಾಮಸ್ವಾಮಿಯವರಿಗೂ, ವೆಂಕಟಾಚಲ ಪತಿಗಳ ಅಣ್ಣನ ಮಗಳಾದ ಶ್ರೀಮತಿ ರಾಜಲಕ್ಷ್ಮೀಯವರಿಗೂ ಮತ್ತು ವೆಂಕಟಾಚಲಪತಿಗಳ ಪುತ್ರಿ ಶ್ರೀಮತಿ ಸರಸ್ವತಿಯವರಿಗೂ ಧನ್ಯವಾದಗಳು.



◆ **ಆರ್.ರಮೇಶ್**
**9886034048**

## ಧನ್ಯವಾದ

* ಸಂಘದ ಹಿತೈಷಿಗಳಾದ ಶ್ರೀ ಶ್ರೀಹರಿ ಉಡುಪರವರು ಸಂಘದ ಚಟುವಟಿಕೆಗಳಾಗಿ ರೂ. 25,000/–ಗಳನ್ನು ದೇಣಿಗೆ ಯಾಗಿ ನೀಡಿದ್ದಾರೆ.

* ಸಂಘದ ಹಿತೈಷಿಗಳಾದ ಶ್ರೀಮತಿ ವೈಜಯಂತಿಯವರು ಸಂಘದ ಚಟುವಟಿಕೆಗಳಿಗಾಗಿ ರೂ. 10,000/–ಗಳನ್ನು ದೇಣಿಗೆಯಾಗಿ ನೀಡಿದ್ದಾರೆ.

* ಶ್ರೀಯುತ ಉಡುಪ ಮತ್ತು ಶ್ರೀಮತಿ ವೈಜಯಂತಿ ಯವರು ನಮ್ಮ ಸಂಘದ ಮೇಲಿನ ವಿಶ್ವಾಸದಿಂದ ಸತತವಾಗಿ ದೇಣಿಗೆ ನೀಡುತ್ತಿರುವುದಕ್ಕೆ ಸಂಘ ಅಭಾರಿ.

ಸಾಧಕರು

## ಹಾಸ್ಯ ಸಾಹಿತಿ, ವೈದ್ಯ ನಮ್ಮ ಕುಟುಂಬದ ಹಿರಿಯಣ್ಣ "ಕೇಫ"



**'ಕೇ**ಫ' ಎಂದೊಡನೆ ತಕ್ಷಣ ನೆನಪಿಗೆ ಬರುವುದು, ಕನ್ನಡಕ ಧರಿಸಿದ, ಕೈಯಲ್ಲೊಂದು ಮೆಡಿಕಲ್ ಕಿಟ್ ಹಿಡಿದ, ಇನ್ನೊಂದು ಕೈಯಲ್ಲಿ "ಕೊರವಂಜಿ" ಮಾಸ ಪತ್ರಿಕೆಯ ಪ್ರತಿಯೊಂದನ್ನು ಹಿಡಿದುಕೊಂಡು ಬರುತ್ತಿರುವ ಹಸನ್ಮುಖದ ವ್ಯಕ್ತಿ. ವ್ಯಂಗ ಚಿತ್ರಕಾರ ಆರ್.ಕೆ.ಲಕ್ಷ್ಮಣ್ ಕೂಡ ಇವರನ್ನು ಹೀಗೆ ಚಿತ್ರಿಸಿ, ಅದನ್ನು "ಕೇಫ"ರವರಿಗೆ ಉಡುಗೊರೆಯಾಗಿ ಕೊಟ್ಟಿದ್ದರು. "ಕೇಫ"ರವರ ನಿಜವಾದ ಹೆಸರು ಎ.ವಿ. ಕೇಶವ ಮೂರ್ತಿ. ಶ್ರೀಯುತರು ದಿನಾಂಕ 25.12.1915ರಂದು ಆಡೆಸೆನಹಟ್ಟಿ ವೆಂಕಟರಾಮಯ್ಯ ಮತ್ತು ಶ್ರೀಮತಿ ಪದ್ಮಾವತಮ್ಮನವರ ಹಿರಿಯ ಪುತ್ರನಾಗಿ ಜನಿಸಿದರು. ಇವರ ಬಾಲ್ಯ–ವಿದ್ಯಾಭ್ಯಾಸ, ತುಮಕೂರು, ಬೆಂಗಳೂರುಗಳಲ್ಲಿ ನಡೆಯಿತು. ಹೈಸ್ಕೂಲ್ ಆದ ನಂತರ ಬೆಂಗಳೂರಿನಲ್ಲಿ ಮೆಡಿಕಲ್ ಸ್ಕೂಲ್ ಸೇರಿ ಎಲ್.ಎಮ್.ಪಿ ಮಾಡಿ ವೈದ್ಯ ಪದವಿ ಪಡೆದರು.

ಆಗಿನ ಕಾಲದಲ್ಲಿ ಎಂ.ಬಿ.ಬಿ.ಎಸ್. ವೈದ್ಯ ಪದವಿ ಪಡೆಯಬೇಕಾದರೆ ಮದ್ರಾಸ್, ಬಾಂಬೆ, ಮುಂತಾದ ದೊಡ್ಡ ಪಟ್ಟಣಗಳಿಗೆ ಹೋಗಿ ಓದಿ ಡಿಗ್ರಿ ಪಡೆಯಬೇಕಾಗಿತ್ತು. ಆನಂತರ ಕೆಲವು ಕಾಲದ ಮೇಲೆ ಬೆಂಗಳೂರಿನಲ್ಲಿ ಮೆಡಿಕಲ್ ಕಾಲೇಜ್ 1955ರಲ್ಲಿ ಸ್ಥಾಪನೆಯಾಗಿ ವೈದ್ಯರಾಗುವ ಅವಕಾಶ ಬೆಂಗಳೂರಿನವರಿಗೂ ಸಿಗುವಂತಾಯಿತು. ಆ ಕಾಲದ ಹೆಸರಾಂತ ವೈದ್ಯರಾಗಿದ್ದ ಡಾ.ಎಂ.ಶಿವರಾಂ (ರಾ.ಶಿ.) ಅವರು, ಇಂಗ್ಲೀಷಿನ ಪ್ರಸಿದ್ಧ "ಪಂಚ್" ಪತ್ರಿಕೆಯಿಂದ ಸ್ಫೂರ್ತಿ ಪಡೆದು "ಕೊರವಂಜಿ" ಎಂಬ ತಿಳಿ ನಗೆಯ ಮಾಸಪ್ರತಿಕೆ ಪ್ರಾರಂಭಿಸಿದರು.

ಇದು ಕೌಟುಂಬಿಕ ಹಾಸ್ಯಕ್ಕಿಂತ ಸಾಮಾಜಿಕ, ರಾಜಕೀಯ ವಿಡಂಬನೆಯನ್ನು ಒದಗಿಸತೊಡಗಿ, ಇದರಲ್ಲಿ "ಕೇಫ" ಅವರ ಲೇಖನಗಳು, ಹಾಸ್ಯ, ವಿಡಂಬನೆಯಿಂದ ಕೂಡಿದ ವ್ಯಕ್ತಿ ವಿಶೇಷಕ್ಕೆ ಒತ್ತು ಕೊಡುವಂಥ ನಗೆ ಬರಹಗಳು ಪ್ರಕಟವಾಗತೊಡಗಿತು. ಸುಮಾರು ಅರವತ್ತು ವರ್ಷದ ಹಿಂದೆ ಕೇಶವ ಮೂರ್ತಿ ಅವರ ಕೊರವಂಜಿಗಾಗಿ ಮೊದಲ ಲೇಖನ ಬರೆಯುತ್ತಿದ್ದಾಗ ಅವರ ಕೊನೆಯ ತಮ್ಮ ಶ್ರೀನಿವಾಸ (ಆಗ ಮೂರು ವರ್ಷದವನು) ತನ್ನ ತೊದಲ ನುಡಿಗಳಿಂದ "ಕೇಫಣ್ಣ" ಎನ್ನುತ್ತಾ ಬಳಿಗೆ ಬಂದರಂತೆ. ಆಗ ಅದನ್ನೇ ಅವರು ಅಂಕಿತ ನಾಮವನ್ನಾಗಿ ಮಾಡಿಕೊಂಡರಂತೆ.

ಕೈಲಾಸಂ, ರಾ.ಶಿ., ನಾ.ಕಸ್ತೂರಿ ಅವರ ನಗೆಬರಹಕ್ಕಿಂತ "ಕೇಫ" ಅವರು ವಿಭಿನ್ನವಾಗಿ ಬರೆಯುತ್ತಿದ್ದರು. ಅದನ್ನು ನಾವು ಅವರ ಮೈಗಳ್ಳರ ಸಂಘ, ವಿರಾಟ ಭವನ, ನಾಗತ್ತೆಯ ಏಕಾದಶಿ, ಮತ್ತು ಅವರ ವೆಂಕು ಸಮಸ್ಯೆ ಇದರಲ್ಲಿ ಕಾಣಬಹುದು. ಮಧ್ಯಮ ವರ್ಗದವರ ಹಾಸ್ಯಪ್ರಜ್ಞೆ,

ಇಂಗ್ಲೀಷ್ ವಿದ್ಯಾಭ್ಯಾಸದಿಂದ ಗಳಿಸಿಕೊಂಡ ಹೊಸ ಜೀವನ ಶೈಲಿ, ಜಾತಿ, ಧರ್ಮಗಳನ್ನೂ ಮೀರಿದ ಮಾನವೀಯತೆ, ಕೆಡುಕೆಂದರೇನೆಂದು ಅರಿಯದ ಅಸೂಯೆಯ ಲವಲೇಶವಿಲ್ಲದ, ಆತಂಕ ರಹಿತ ನಿರಾಳತೆಯಿಂದ ಅವರ ಲೇಖನಗಳು ಹೊರಹೊಮ್ಮುತ್ತಿದ್ದವು. ಇವು ಹಾಸ್ಯ ಪ್ರಜ್ಞೆಯಿಂದಿರುವ ಮನೋಧರ್ಮ ಕೂಡ ಆಗಿತ್ತು.

ದವಾಖಾನೆಯಲ್ಲಿ ಕ್ಲಿಷ್ಟ ವೈದ್ಯಕೀಯ ಪ್ರಕರಣಗಳ ಬಗ್ಗೆ ರಾ.ಶಿ.ಯವರ ಜೊತೆ ಚರ್ಚಿಸುವಾಗ ಕೂಡ ಅದಕ್ಕೆ ಹಾಸ್ಯ ಲೇಪನವಿರುತ್ತಿತ್ತು.

ಯಾವುದೇ ಸಂದರ್ಭದಲ್ಲಿ ಕೌಟುಂಬಿಕ ಸಮಸ್ಯೆಗಳನ್ನು ಹಾಸ್ಯಪ್ರಜ್ಞೆಯಿಂದಲೇ ಬಗೆಹರಿಸಿ ಸಣ್ಣವರ ತಪ್ಪುಗಳನ್ನು ನವಿರಾಗಿ ತಿದ್ದುತ್ತಿದ್ದರು.

ಶಿವಮೊಗ್ಗದಲ್ಲಿ ರೋಟರಿ ಅಂತರರಾಷ್ಟ್ರೀಯ ಸಂಸ್ಥೆ, ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಮತ್ತು ಮಲೆನಾಡಿನ ಸಂಘ ಸಂಸ್ಥೆಗಳಲ್ಲಿ 10–15 ವರ್ಷಗಳ ಕಾಲ ಕಾರ್ಯದರ್ಶಿಯಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದ್ದರು.

ಇವರ ನಿಸ್ವಾರ್ಥ ಸೇವಾ ಮನೋಭಾವ, ವೈದ್ಯರಾಗಿಯೂ ಹಣ ಮಾಡುವ ಆಸೆ ಇಲ್ಲದೆ, ಇರುವುದರಲ್ಲೇ ತೃಪ್ತರಾಗಿ ಜೀವನ ಸಾಗಿಸುವ ಮುಗ್ಧತೆ, ಎಲ್ಲರನ್ನೂ ಮರ್ಯಾದೆಯಿಂದ ಕಾಣುವ ಅವರ ಗುಣಗಳು ಈಗಿನ ಯುವ ವೈದ್ಯರಿಗೂ ಮತ್ತು ನಮಗೂ ಅನುಕರಣೀಯವಾದುದು.

ಇವರು ಕೊರವಂಜಿಯಲ್ಲದೆ, ಪ್ರಜಾಮತ, ವಿನೋದ ಪತ್ರಿಕೆಗಳಿಗೆ ಮತ್ತು ಮಲೆನಾಡಿನ ಕೆಲವು ಮಾಸಪತ್ರಿಕೆಗಳಲ್ಲೂ ಬರೆಯುತ್ತಿದ್ದರು. ಎರಡು–ಮೂರು ಕಥೆ ಪುಸ್ತಕಗಳು ಕೂಡ ಅಂಕಿತ ಪ್ರಕಾಶನದಿಂದ ಹೊರಬಂದಿದೆ.

ಕೇಶವ ಡಾಕ್ಟರು ಎಂದರೆ ಶಿವಮೊಗ್ಗದಲ್ಲಿ ಹೆಸರುವಾಸಿ. ದೂರ ಊರುಗಳಿಂದ, ಹಳ್ಳಿಗಳಿಂದ ಕಾಲೇಜ್ ವಿದ್ಯಾಭ್ಯಾಸ ಮಾಡಲು ಬರುವ ಹೆಣ್ಣು ಮಕ್ಕಳನ್ನು ಅವರ ವಿದ್ಯಾಭ್ಯಾಸ ಪೂರೈಸುವವರೆಗೂ ತಮ್ಮಲ್ಲೇ ಇರಿಸಿಕೊಂಡು ಆಶ್ರಯನೀಡುತ್ತಿದ್ದರು. ಮನೆ ಮಕ್ಕಳಂತೆ, ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಇವರ ಹೃದಯ ವೈಶಾಲ್ಯಕ್ಕೆ ಇದೊಂದು ಉದಾಹರಣೆ ಅಷ್ಟೆ. ತಂಗಿ, ತಮ್ಮನ ಮಕ್ಕಳಿಗೂ ಆಶ್ರಯದಾತರಾಗಿದ್ದರು.

ಸರ್ವರಿಗೂ ಅನುಕರಣೀಯರಾದ ಮಹಾನುಭಾವನಿಗೆ ನಮ್ಮದೊಂದು ಗೌರವಪೂರ್ವಕ ನಮನಗಳು.

ಇಂಥಹ ಹಿರಿಯಣ್ಣನನ್ನು ಪಡೆದ ನಮ್ಮ ಕುಟುಂಬ ಧನ್ಯ.

◆ **ಗಾಯತ್ರಿ ಶೇಷಾಚಲ**
9449730073



## ಸಂಘಕ್ಕೆ ವಾರ್ಷಿಕ ದೇಣಿಗೆ 500 ರೂ. ನೀಡಿದ ಸದಸ್ಯರು

| | |
|---|---|
| ಶ್ರೀಯುತರು | ಎ.ವಿ. ಶ್ರೀನಿವಾಸ |
| ಕೆ. ಗುಂಡಪ್ಪ | ಕೃಷ್ಣಸ್ವಾಮಿ ಸಿ. |
| ಜಿ. ಲೀಲಾವತಿ | ಮಂಜುನಾಥ್ ಎಸ್.ವಿ. |
| ಜಿ. ಗುರುಪ್ರಸನ್ನ | ಶ್ರೀನಿವಾಸ್ ಹೆಚ್.ಪಿ. |
| ನಿತಿನ್ ಭಾಸ್ಕರ್ | ಹೆಚ್.ಎಸ್. ಪರಮೇಶ್ವರ |
| ಮಂಜುನಾರಾಯಣ್ ಕೆ. | ಆರ್. ವೆಂಕಟೇಶ್ ಪ್ರಸಾದ್ |
| ವನಿತಾ ಮಂಜುನಾರಾಯಣ್ | ಕೃಷ್ಣ ಶರ್ಮ ಎ.ಆರ್. |
| ಎಸ್. ಸತ್ಯನಾರಾಯಣ | ವಿಶ್ವನಾಥ್ ಶರ್ಮ ಎ.ಕೆ. |
| ನಾಗೇಶ್ ಟಿ.ಎಸ್. | ಸುಬ್ಬರತ್ನಮ್ಮ |
| ಗಣೇಶ್ ಶ್ರೀಧರ್ ಆರ್. | ಉಮಾ ಎನ್. ಗೋವಿಂದ್ |
| ರೂಪಶ್ರೀ ಎಂ. | ಕೆ.ಆರ್. ಲಕ್ಷ್ಮೀನಾರಾಯಣ್ |
| ಅಭಯ್ ಜಿ. ಶ್ರೀಧರ್ | ವಿಮಲಾ ಜಯರಾಂ |
| ಟಿ.ಎಸ್. ಚಂಪಕ | ವೀಣಾ ಅರವಿಂದ್ |
| ಎ. ಈಶ್ವರನ್ | ನಾಗರಾಜ ಜಿ.ಎಸ್. |
| ಎಸ್.ಸಿ. ಶ್ರೀನಿವಾಸ್ | ಹರ್ಷ ನಾಗರಾಜ |
| ಶಂಕರ್ ಪ್ರಸಾದ್ | ಸತ್ಯ ಪ್ರಸಾದ್ ಎಸ್.ಆರ್. |
| ಅರುಣ್ ವಿ. | ಬದರಿನಾರಾಯಣ್ ಹೆಚ್.ಆರ್. |
| ಅಶೋಕ್ ವಿ. | ಟಿ.ಎನ್. ರಘು |
| ಅನ್ನಪೂರ್ಣ ವಿ. | ಆರ್. ರಾಜೇಶ್ವರಿ |
| ಸುಮಾ ಅರಣ್ | ಕೆ. ಚಂದ್ರಶೇಖರ್ |
| ಸೂರಜ್ ಅರುಣ್ | ಕೆ.ಎಸ್. ನಾರಾಯಣ ಸ್ವಾಮಿ |
| ಕೆ.ಬಿ.ಎಸ್. ಶರ್ಮ | ಶೇಷಾಚಲಂ ಆರ್.ಜಿ. |
| ಬಿ. ಸುಬ್ರಹ್ಮಣ್ಯಂ | ಸ್ವಾಮಿನಾಥ್ ಜಿ. |
| ಜಿ.ಎನ್. ಪ್ರಸಾದ್ | ಅಶೋಕ್ ಕುಮಾರ್ ಜಿ. |
| ಭರತ್ ಶರ್ಮ | ಸೌಮ್ಯ ರಘುನಾಥ್ |
| ಎಸ್. ಸೋಮಸುಂದರ್ | ಎಸ್. ಬಾಲಕೃಷ್ಣ |
| ಎಸ್. ಚಂದ್ರಶೇಖರ್ | ಬಿ.ಎ. ಲಕ್ಷ್ಮಣ್ ಶರ್ಮ |
| ಎಸ್. ರಘುನಂದನ್ | ಪದ್ಮನಾಭನ್ ಸರ್ಜಾಪುರ |
| ಎಸ್. ರಮಾದೇವಿ | ಎಸ್.ಕೆ. ಸ್ವರ್ಣ |
| ಮೋಹನ್ ಎಸ್. | ಶಾಂತ |
| ವಾಸು ಎಸ್. | ಆರ್. ರಾಜಲಕ್ಷ್ಮೀ |
| ವಿ.ಎಸ್. ಮಣಿ | ರವಿಕುಮಾರ್ ಎಸ್. |
| ಆರ್.ಎಸ್. ವೆಂಕಟಗಿರಿಯಪ್ಪ | ಮೇಘನ ರವಿಕುಮಾರ್ |
| ಮತಾಂಗ್ ಶೇಷಗಿರಿ | ಮೈತ್ರಿ ರವಿಕುಮಾರ್ |
| ಯಶೋಧರ ಉಡುಪ | ಸುಮಿತ್ರ |
| ಎಸ್.ಆರ್. ಬಾಲಸುಬ್ರಮಣ್ಯಂ | ಬಿ.ವಿ. ಜಯರಾಂ |

## ಸಂಘಕ್ಕೆ ದೇಣಿಗೆ ನೀಡಿದ ಮಹನೀಯರು

ಶ್ರೀಯುತರು

| | |
|---|---|
| ಬಿ.ಎ. ರಾಮಸ್ವಾಮಿ 5000/- | ಎ.ವಿ. ರಾಮಸ್ವಾಮಿ 400/- |
| ಜಿ.ಎಸ್. ನಾಗರಾಜ 3000/- | ಕೃಷ್ಣಸ್ವಾಮಿ ಸಿ. 250/- |
| ಶ್ರೀಮತಿ ಪದ್ಮಾವತಿ 2000/- | ಆರ್.ಎನ್. ವೆಂಕಟಸುಬ್ಬರಾವ್ 200/- |

## ಸಂಘದ ಹೊಸ ಸದಸ್ಯರಿಗೆ ಸ್ವಾಗತ

ಶ್ರೀಯುತರು

ನಟರಾಜ್, ಗೌರಿ ಬಿ. ನಟರಾಜ್, ನಕುಲ್ ಭಾಸ್ಕರ್ ಪೂರ್ಣಿಮಾ ನಿತಿನ್, ನಾಗವೇಣಿ ಭಾಸ್ಕರ್, ಸುಜಾತ ಶ್ರೀನಿವಾಸ್, ಸತ್ಯಪ್ರಸಾದ್ ಎಸ್.ಆರ್., ಕಲ್ಯಾಣಿ ಬಿ.ಎಲ್.

## ಸುದ್ದಿಮನೆ

### ಹಿರಿಯಯರ ಹುಟ್ಟುಹಬ್ಬಕ್ಕೆ ಶುಭಾಶಯ

* ಸಮುದಾಯದ ಹಿರಿಯರಾದ ಹೊಸಕೋಟೆ **ಶ್ರೀ ರಾಮಕೃಷ್ಣ**ರವರ 99ನೇ ವರ್ಷದ ಹುಟ್ಟುಹಬ್ಬವನ್ನು ದಿನಾಂಕ 01-07-2019ರಂದು ಶ್ರೀಮತಿ ಸುವರ್ಣಾ ಶಿವಪ್ರಸಾದ್‌ರವರ ಕುಟುಂಬ ಆಚರಿಸಿತು. ಶ್ರೀಯುತರು ಸಂಘದ ಸದಸ್ಯರಾದ ಶ್ರೀಮತಿ ರತ್ನರಾವ್ ಮತ್ತು ಶ್ರೀ ಬದರಿ ನಾರಾಯಣ್‌ರವರ ತಾತ.

* ಯಮಲೂರು ಶ್ರೀನಿವಾಸಯ್ಯನವರ ಮಗಳು ಆಡೆಸನೆಟ್ಟಿ ಕೃಷ್ಣಮೂರ್ತಿಯವರ ಪತ್ನಿಯಾದ **ಶ್ರೀಮತಿ ಗೌರಮ್ಮ**ನವರು ತಮ್ಮ 90ನೇ ಹುಟ್ಟು ಹಬ್ಬವನ್ನು ಕುಟುಂಬದೊಂದಿಗೆ ಆಚರಿಸಿಕೊಂಡರು.

* ಸಂಘದ ಹಿರಿಯ ಸದಸ್ಯರಾದ **ಶ್ರೀ ಎ.ವಿ. ಶ್ರೀನಿವಾಸ್** ರವರು 80 ವಸಂತಗಳನ್ನು ಪೂರೈಸಿದ ಸಂದರ್ಭಕ್ಕೆ ಸಂಘವು ಶುಭಹಾರೈಸುತ್ತದೆ.

* ಸಂಘದ ಖಜಾಂಚಿಗಳಾದ **ಶ್ರೀ ಸತ್ಯನಾರಾಯಣ್** (ಸತೀಶ್)ರವರು 60 ವಸಂತಗಳನ್ನು ಪೂರೈಸಿದ ಶುಭ ಸಂದರ್ಭದಲ್ಲಿ ಸಂಘವು ಶುಭ ಹಾರೈಸುತ್ತದೆ.

### ಜನನ

ಸಂಘದ ಪೋಷಕರಾದ ಶ್ರೀ ಬಿ. ಶೇಷಾಚಲ ಮತ್ತು ಶ್ರೀಮತಿ ಗಾಯತ್ರಿ ಶೇಷಾಚಲರವರ ಮಗ ಶ್ರೀ ಸುಧೀಂದ್ರ ದಂಪತಿ ಗಳಿಗೆ ದಿನಾಂಕ 10-06-2019ರಂದು ಅಮೆರಿಕಾದಲ್ಲಿ ಗಂಡು ಮಗುವಿನ ಜನನವಾಗಿದೆ.

### ಬ್ರಹ್ಮೋಪದೇಶ

* ಸಂಘದ ಕಾರ್ಯಾಧ್ಯಕ್ಷ ಶ್ರೀ ಹೆಚ್.ಕೆ. ಶಶಿಧರ್ ಮತ್ತು ಶ್ರೀಮತಿ ಪದ್ಮಶ್ರೀರವರ ಪುತ್ರ **ಚಿ. ಸಮ್ಮಿತ್ ಎಸ್.** ರವರ ಉಪನಯನವು ದಿನಾಂಕ 29.05.2019ರಂದು ಬೆಂಗಳೂರಿನಲ್ಲಿ ನೆರವೇರಿತು.

* ಸಂಘದ ಸದಸ್ಯರಾದ ಶ್ರೀ ಟಿ.ಎಸ್. ಮಣಿ ಮತ್ತು ಶ್ರೀಮತಿ ಶಶಿರೇಖಾ ಮಣಿಯವರು ದಿ: 29-05-2019 ರಂದು ತಮ್ಮ ಪುತ್ರ **ಚಿ. ಸಮೃದ್ಧ್ ಎಸ್.**ರವರ ಬ್ರಹ್ಮೋಪದೇಶ ವನ್ನು ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದಲ್ಲಿ ನೆರವೇರಿಸಿದರು.

* ತಟ್ಟನಹಳ್ಳಿ ಶ್ರೀ ನಂಜುಂಡಯ್ಯ (ಎಲ್.ಐ.ಸಿ.)ಯವರ ಮೊಮ್ಮಗ, ಸದಸ್ಯ ಶ್ರೀ ಟಿ.ಎನ್. ರವೀಂದ್ರರಾಮ್ ಮತ್ತು ಶ್ರೀಮತಿ ಪಾರ್ವತಿರವರ ಪುತ್ರ **ಚಿ. ಆರ್. ಕಾರ್ತಿಕ್‌ರಾಂ** ರವರ ಉಪನಯನವು ದಿ: 9.6.2019ರಂದು ಮೈಸೂರಿನಲ್ಲಿ ನೆರವೇರಿತು.

**ವಟುಗಳಿಗೆ ಸಂಘವು ಶುಭ ಹಾರೈಸುತ್ತದೆ.**

## ಕಂದನಿಗೆ ಕಿನ್ನರಿಯರ ರಹಸ್ಯ ಉಡುಗೊರೆ

1. **ಶಕ್ತಿ, ಸಾಮರ್ಥ್ಯ, ತೀಕ್ಷ್ಣತೆ, ಪಟುತ್ವ** ಕಂದಾ, ಅಗತ್ಯವಿರುವಾಗ ಖಂಡಿತ ಇದರ ಉಪಯೋಗ ಮಾಡಿಕೊ.

2. **ಸೌಂದರ್ಯ** ಕಂದಾ, ಇದು ಕೇವಲ ಹೊರಗಿನ ಅಂದ, ಚೆಂದಗಳಿಗೆ ಸೀಮಿತವಲ್ಲ. ಸೌಂದರ್ಯವೆಂದರೆ, ಸುಂದರ ಮನಸ್ಸು, ಅನುಕಂಪ, ಮೈತ್ರಿ, ಕಾರುಣ್ಯ, ಪ್ರೇಮ ಭರಿತ ಮನಸ್ಸು ಇಂತಹ ಮನಸ್ಸಿಗೆ ಜಗತ್ತೇ ಸೃಷ್ಟಿಕರ್ತನ ಪ್ರತಿಬಿಂಬ. ನಿನ್ನ ಪ್ರತಿಯೊಂದು ಕ್ರಿಯೆಯಲ್ಲೂ ಈ ಸೌಂದರ್ಯ ಅಭಿವ್ಯಕ್ತವಾಗಲಿ.

3. **ಧೈರ್ಯ, ನಿರ್ಭೀತಿ, ಕೆಚ್ಚು, ಎದೆಗಾರಿಕೆ** ಕಂದಾ, ಇವುಗಳಿಂದ ಯಾರೂ ನಡೆಯದ ಹಾದಿಯನ್ನು ಆಯ್ದುಕೋ. ಅದರಲ್ಲಿ ನಡೆದು ಗುರಿಮುಟ್ಟು. ನಿನ್ನಿಂದ ಈ ಜಗತ್ತು ಹೊಸ ಆಯಾಮ ಪಡೆಯಲಿ. ಜಗತ್ತಿಗೊಂದು ಹೊಸ ಬೆಳಕು ತೋರಿಸುವವನಾಗು.

4. **ಅನುಕಂಪ, ಮೈತ್ರಿ, ಕರುಣೆ** ಕಂದಾ, ಇವುಗಳಿಂದ ಸಮಸ್ತ ಸೃಷ್ಟಿಯೊಂದಿಗೆ ಮೃದುವಾಗಿ ನಡೆದುಕೊ. ನಿನ್ನನ್ನ ನೋಯಿಸಿದವರನ್ನೂ ಹೊರಗಿಡಬೇಡ. ಅವರು ಅಬೋಧರು, ತಿಳಿಯದವರು. ಅವರನ್ನು ಕ್ಷಮಿಸು. ನಿನ್ನ ಕ್ಷಮೆ, ಮೈತ್ರಿಗಳಿಂದ ಅವರ ಉಡುಗೊರೆ ಅವರಿಗೆ ನೆನಪಾಗಲಿ.

5. **ಆನಂದ** ಕಂದಾ, ಆನಂದವನ್ನು ಸಾಮಾನ್ಯ ಸಂತೋಷ ಎನ್ನುತ್ತಾರೆ. ಸಂತೋಷ ಭೌತಿಕ ವಸ್ತುಗಳ ಮೇಲೆ ಅವಲಂಬಿಸಿದೆ. ಅದು ಕ್ಷಣಿಕ. ಆನಂದ ಆತ್ಮನಲ್ಲಿಂದ ಪುಟಿಯುವುದು. ಇದು ಶಾಶ್ವತ.

6. **ನಂಬಿಕೆ, ವಿಶ್ವಾಸ** ಕಂದಾ, ಇದೇ ಬದುಕಿನ ಬುನಾದಿ. ನೀನು ವಿಶ್ವ ಚೈತನ್ಯದ್ದೇ ಕುಡಿ. ಆದುದರಿಂದ ಅದೇ ನೀನು ಎಂಬ ನಂಬಿಕೆ, ವಿಶ್ವಾಸಗಳಿಂದ ನೀನು ಜಗತ್ತನ್ನೇ ಸುಧಾರಿಸಬಲ್ಲೆ.

7. **ಕ್ರಿಯಾಶಕ್ತಿ** ಕಂದಾ, ಇದೊಂದು ಮಂತ್ರದಂಡ. ಇಚ್ಛಾಶಕ್ತಿ, ಜ್ಞಾನಶಕ್ತಿ ಒಂದಾಗುವಿಕೆ? ಇದೊಂದು ತಪಸ್ಸು.

8. **ಕಲ್ಪನಾ ಶಕ್ತಿ** ಕಂದಾ, ಇಚ್ಛಾಶಕ್ತಿಯ ವಿಸ್ತೃತರೂಪ. ಕಲ್ಪನೆಯ ಕುದುರೆ ಗುರಿ ಮುಟ್ಟಿದರೆ ಸೈ! ನೀನು ಏನು ಬೇಕಾದರೂ ಸಾಧಿಸಬಲ್ಲೆ.

9. **ಗೌರವ** ಕಂದಾ, ನಿನ್ನನ್ನು ನೀನು ಗೌರವಿಸಬೇಕು. ನೀನೊಂದು ಅದ್ಭುತ, ವಿಶ್ವದೊಡೆಯನ ಕಲಾಸೃಷ್ಟಿ. ನಿನ್ನೊಂದಿಗೆ ಈ ಸೃಷ್ಟಿ ಕರ್ತನನ್ನು, ಅವನ ಸುಂದರ ಅದ್ಭುತ ಸೃಷ್ಟಿಯನ್ನು ಗೌರವಿಸು.

10. **ವಿವೇಚನೆ, ಪ್ರಜ್ಞೆ** ಕಂದಾ, ಪ್ರಜ್ಞೆ, ವಿವೇಚನಗಳೇ ಬ್ರಹ್ಮ. ಬ್ರಹ್ಮ ಎಂದರೆ ಜ್ಞಾನ. ಜ್ಞಾನವಂತನಾಗು, ಪ್ರಜ್ಞಾವಂತನಾಗು.

11. **ಪ್ರೇಮ** ಕಂದಾ, ಬದುಕಿನ ಸೂತ್ರವಿದು. ಪ್ರೇಮದಿಂದ ಸೃಷ್ಟಿ ತೊನೆಯುತ್ತದೆ.

12. **ಶ್ರದ್ಧೆ, ನಿಷ್ಠೆ, ಆಸ್ಥೆ** ಕಂದಾ, ಶ್ರದ್ಧೆಯಿಂದ ಮಾಡಿದ ಯಾವುದೇ ಕೆಲಸ ವ್ಯರ್ಥವಾಗುವುದಿಲ್ಲ. ನಿಷ್ಠೆ, ಆಸ್ಥೆಗಳು ಯಶಸ್ಸಿನ ಬುನಾದಿ.

ಇಂತಹ ಅಮೂಲ್ಯ ಗುಣಗಳು ನಿನ್ನದಾಗಲಿ.

◆ **ಕಿತ್ತಗಾನಹಳ್ಳಿ ಶ್ರೀನಿವಾಸಯ್ಯ**

## ಹೀಗೂ ಒಂದು... ಧನ್ಯವಾದ



ಬೃಹಚ್ಚರಣ ಸಂಘ ದಿನಾಂಕ: 03.10.2010 ರಂದು ಕಿತ್ತಿಗಾನಹಳ್ಳಿಯಲ್ಲಿ ಸಭೆ ಸೇರಿ ಶ್ರೀ ನಂಜುಂಡದೀಕ್ಷಿತರು ಹಾಗೂ ಶ್ರೀ ಶ್ರೀನಿವಾಸಯ್ಯನವರ ಮಾರ್ಗದರ್ಶನದಲ್ಲಿ ಪುನರ್ರಚಿತಗೊಂಡಿತು. ಅಂದಿನಿಂದ ಸಂಘದ ಅಧ್ಯಕ್ಷರಾಗಿ ಶ್ರೀ ಸೋಮಸುಂದರ, ಕಾರ್ಯದರ್ಶಿಯಾಗಿ ಶ್ರೀ ವಿ.ಎಸ್. ಮಣಿಯವರು ಸಂಘವನ್ನು ಮುನ್ನಡೆಸುತ್ತಿದ್ದು, ಈ ಇತ್ತೀಚೆಗೆ ಯುವ ಪೀಳಿಗೆಯು ಸಂಘವು ನಿರ್ವಹಿಸಲೆಂಬ ಸದುದ್ದೇಶ ದಿಂದ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುತ್ತಾರೆ.

ಈ ಸಂದರ್ಭದಲ್ಲಿ ಸಂಘಕ್ಕಾಗಿ ಶ್ರಮಿಸಿದವರನ್ನೆಲ್ಲಾ ಶ್ರೀ ಸೋಮಸುಂದರರವರು ತಮ್ಮ ಸ್ವಗೃಹದಲ್ಲಿ ಆದರ ದಿಂದ ಬರಮಾಡಿಕೊಂಡರು. ಶ್ರೀ ಸೋಮುರವರು ತಮ್ಮೊಂದಿಗೆ ಸಂಘವು ಬೆಳೆಯಲು ಸಹಕರಿಸಿದ ಪ್ರತಿಯೊಬ್ಬ ಸದಸ್ಯರಿಗೂ ಆತ್ಮೀಯತೆಯಿಂದ ಧನ್ಯವಾದ ಅರ್ಪಿಸಿದರು. ಇದೇ ಸಂದರ್ಭದಲ್ಲಿ ಕಾರ್ಯದರ್ಶಿಗಳಾದ ಶ್ರೀ ವಿ.ಎಸ್. ಮಣಿಯವರು ಮಾತನಾಡಿ ಸಂಘಕ್ಕೆ ಇನ್ನು ಮುಂದೆ ಕೂಡ ಮಾರ್ಗದರ್ಶನ ನೀಡುವುದಾಗಿ ತಿಳಿಸಿದರು. ಇದರೊಂದಿಗೆ ಅವರ ಕುಟುಂಬ ಸದಸ್ಯರೆಲ್ಲರೂ ಪ್ರೀತಿ, ವಿಶ್ವಾಸಗಳಿಂದ ಕೂಡಿದ ಅತಿಥ್ಯ, ರುಚಿಯಾದ ಭೋಜನ ನೀಡಿದ್ದು ಬಂದವರೆಲ್ಲರೂ ಸಂತುಷ್ಟ ಗೊಂಡರು.

ಹಿರಿಯ ಸದಸ್ಯರಾದ ಭಿನ್ನಮಂಗಲದ ಶ್ರೀ ಪದ್ಮನಾಭ್ ಹಾಗೂ ಶ್ರೀ ಚಂದ್ರಮೌಳಿಯವರು ಸಂಘ ಮತ್ತು ಅದರ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

# ಶ್ರದ್ಧೆ

ಬದುಕಲು ಬೇಕು ಬದುಕುವ ಈ ಮಾತು

ಶ್ರದ್ಧೆಯು ಚಮತ್ಕಾರ ಮಾಡಿ ತೋರಿಸಬಲ್ಲದು. ಜೀವನದಲ್ಲಿ ಏನನ್ನಾದರೂ ಸಾಧಿಸಬೇಕೆನ್ನುವ ಮನುಷ್ಯನಲ್ಲಿ ಶ್ರದ್ಧೆ ಇರಬೇಕು. ಮನುಷ್ಯನ ಜೀವನದಲ್ಲಿ ಒಳ್ಳೆಯದು ಏನೇನು ಆಗಿದೆಯೋ, ಅದರ ಹಿಂದೆ ಶ್ರದ್ಧೆ ಇದೆ. ಒಳ್ಳೆಯ ಫಲ ಕೊಡುವ ವೃಕ್ಷದ ತಾಯಿ ಬೇರು ಈ ಶ್ರದ್ಧೆಯೇ ಆಗಿದೆ. ಒಳ್ಳೆಯ ಫಲ ಕೊಡದ ಮರ ಬದುಕಿದ್ದರೂ ಅದರ ಬೇರುಗಳು ಒಣಗಿರುವುದೆಂದೇ ಹೇಳಬೇಕು.

ಶ್ರದ್ಧೆ ಎಲ್ಲಿ ಇದೆಯೋ ಅಲ್ಲಿ ಧೈರ್ಯ ಇರುತ್ತದೆ. ಶ್ರದ್ಧೆ ಇಲ್ಲದ ಅಪಾರ ಬಲ ಸೋಲುತ್ತದೆ. ಶ್ರದ್ಧೆ ಇರುವ ಅಸಮ ಬಲ ಗೆಲ್ಲುತ್ತದೆ. ಯಾವನಲ್ಲಿ ಶ್ರದ್ಧೆ ಇರುವುದೋ ಅವನಲ್ಲಿ ನಿರಾಸೆಯೇ ಇರುವುದಿಲ್ಲವೆಂದು ಮಹಾತ್ಮ ಗಾಂಧಿಯವರು ಹೇಳುತ್ತಿದ್ದರು. ಎಂತಹ ಪ್ರತಿಕೂಲ ಹವೆಯಲ್ಲಿಯೂ ಅದು ನಮ್ಮನ್ನು ದೃಢವಾಗಿ ನಿಂತಿರುವಂತೆ ಮಾಡುತ್ತದೆ. ಶ್ರದ್ಧೆ ಇರುವ ಮನುಷ್ಯನಲ್ಲಿ ನಿರ್ಧಾರ ಇರುತ್ತದೆ. ನಿರ್ಧಾರ ಇರುವಲ್ಲಿ ನಿರಾಸೆ ಇರುವುದಿಲ್ಲ.

ಮನುಷ್ಯನ ಮೇಲೆ ಎಷ್ಟೇ ಆಘಾತಗಳು ಬೀಳಲಿ, ಗಂಡಾಂತರಗಳು ಅವನನ್ನು ಹೆಜ್ಜೆ ಹೆಜ್ಜೆಗೂ ಹೆದರಿಸಲಿ, ಅವನ ಶ್ರದ್ಧೆ ಕೈ ಹಿಡಿದು ಅವನನ್ನು ಮುಂದೆ ನಡೆಸುತ್ತದೆ. ಶ್ರದ್ಧೆಯಲ್ಲಿ ಜೀವ ರಸಾಯನ ಇದೆ. ಅದು ಸೃಷ್ಟಿ ಕಾರ್ಯವನ್ನು ಮಾಡುತ್ತದೆ. ಅದರಲ್ಲಿ ಸೃಜನಶೀಲತೆ ಇದೆ. ಅದು ಚಮತ್ಕಾರಗಳನ್ನು ಮಾಡಿ ತೋರಿಸುತ್ತದೆ.

ಜನರಲ್ಲಿ ಬದುಕಬೇಕೆನ್ನುವ, ಬೆಳೆಯಬೇಕೆನ್ನುವ, ಉಚ್ಛ್ರಾಯ ಸ್ಥಿತಿಗೆ ಹೋಗಬೇಕೆನ್ನುವ ಆಸೆ ಇದ್ದರೆ, ಅವರಲ್ಲಿ ಶ್ರದ್ಧೆ ಇದ್ದೇ ಇರಬೇಕು. ಆದರೆ ಶ್ರದ್ಧೆ ಇಲ್ಲದ ವ್ಯಕ್ತಿಗೆ ಆಗಲಿ, ದೇಶಕ್ಕೆ ಆಗಲಿ, ದೊಡ್ಡ ಭವಿತವ್ಯ ಇರಲಾರದು. ತನ್ನ ದೃಷ್ಟಿ ಮಸುಕಾದ ವ್ಯಕ್ತಿಯಾಗಲಿ, ದೇಶವಾಗಲಿ, ಅವನತಿ ಗೊಳ್ಳುವುದು ಖಂಡಿತ. ಶ್ರದ್ಧೆ ಇರುವಲ್ಲಿ ಸದ್ಗುಣ ಇರುತ್ತದೆ. ಸದ್ಗುಣ ಇದ್ದರೆ ಸತ್ಕಾರ್ಯ ನಡೆಯುತ್ತದೆ. ಶ್ರದ್ಧೆ ಇರುವ ಮನುಷ್ಯನು ತನ್ನ ಹೃದಯವನ್ನು ನಂಬುತ್ತಾನೆ. ಶ್ರದ್ಧೆಗೆ ಹೃದಯವೇ ಆಶ್ರಯ ಸ್ಥಾನವಾಗಿದೆ. ಕೊಲಂಬಸ್ಸಿಗೆ ಹೊಸ ಜಗತ್ತನ್ನು ಕಂಡುಹಿಡಿಯುವ ದಾರಿ ಗೊತ್ತಿರಲಿಲ್ಲ. ಆದರೆ ಅದನ್ನು ಕಂಡುಹಿಡಿಯಬೇಕೆನ್ನುವ ಬಹು ಬಲವಾದ ಶ್ರದ್ಧೆ ಅವನಲ್ಲಿ ಇದ್ದಿತು. ಆ ಶ್ರದ್ಧೆಯೇ ಅವನಿಗೆ ಹೊಸ ಜಗತ್ತನ್ನು ಹುಡುಕಿಕೊಟ್ಟಿತು. ಈ ಶ್ರದ್ಧೆಯು ಪ್ರೇಮದಂತೆ, ತನ್ನಿಷ್ಟಕ್ಕೆ ತಾನೇ ಬರಬೇಕು. ಅದನ್ನು ಒತ್ತಾಯದಿಂದ ತಂದು ಹಾಕುವುದಕ್ಕೆ ಆಗುವುದಿಲ್ಲ. ಶ್ರದ್ಧೆ ಇದ್ದವನು ಗೆದ್ದ. ಶ್ರದ್ಧೆ ಇಲ್ಲದವನು ಪೆದ್ದ.

◆ ಶ್ರೀನಿವಾಸಯ್ಯ

# ನಮ್ಮನ್ನಗಲಿದ ನಮ್ಮವರು

* ಸಂಘದ ಪೋಷಕ ಕೆ.ಸಿ. ಶೇಖರ್‌ರವರ ಪತ್ನಿ, **ಉಮಾಶೇಖರ್ (71 ವರ್ಷ)** ದಿನಾಂಕ : 10–04–2019

* ಸಂಘದ ಸದಸ್ಯ, ಮಂಜುನಾಥ್‌ರವರ ಸೋದರಿ **ಗಾಯತ್ರಿ,** ದಿನಾಂಕ : 16–05–2019

* ಸಂಘದ ಹಿರಿಯ ಸದಸ್ಯ **ಬಿ.ಎನ್. ಛಾಯಾಪತಿ (86 ವರ್ಷ)** ದಿನಾಂಕ : 30–06–2019



ಸಂಘದ ಹಿಂದಿನ ಕಾರ್ಯದರ್ಶಿ ಹಾಗೂ ಪೋಷಕರಾದ ಶ್ರೀ ಎಸ್. ಶ್ರೀನಿವಾಸಯ್ಯ ನವರ ಧರ್ಮಪತ್ನಿ **ಎಸ್. ನಿರ್ಮಲಾ** ರವರು ದಿನಾಂಕ 20–04–2019 ಶನಿವಾರದಂದು ನಮ್ಮನ್ನಗಲಿರುತ್ತಾರೆ. ದಿ। ಎನ್.ವಿ. ಶ್ಯಾಮಣ್ಣ ಹಾಗೂ ಶ್ರೀಮತಿ ಮಧುರಾಂಬಾರವರ ಪುತ್ರಿಯಾದ ಈಕೆ ಕನ್ನಡ, ಸಂಗೀತ, ಅರ್ಥಶಾಸ್ತ್ರ ವಿಷಯಗಳಲ್ಲಿ ಪದವೀಧರೆ ಯಾಗಿದ್ದರು.



ನಮ್ಮ ಸಮುದಾಯದ ಹಿರಿಯರಾದ ದಿ। ಸಣ್ಣೇಸೂರಪ್ಪನವರ ಪತ್ನಿ ಹಾಗೂ ಸಂಘದ ಅಧ್ಯಕ್ಷ, ಪೋಷಕರಾದ ಶ್ರೀ ಸೋಮಸುಂದರ, ಶ್ರೀ ಚಂದ್ರಶೇಖರ್ ರವರ ತಾಯಿ **ಪದ್ಮಾವತಮ್ಮ**ನವರು ದಿನಾಂಕ 11–07–2019ರಂದು ನಮ್ಮನ್ನ ಅಗಲಿರುತ್ತಾರೆ.

Telefax : 2677 0066, 26771695

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**

**AKHILA KARNATAKA BRAHMANA MAHASABHA (R.)**

Gayathri Bhavana, # 3070, Gayathri Bhavana Road (14th Cross), 9th Main, BSK 2nd Stage
BANGALORE - 560 070. E-mail : akbms.org@gmail.com Website : www.akbms.org

| K.N. VENKATANARAYANA | K. RAMAPRASAD | Dr. K. RAMAKRISHNA |
|---|---|---|
| PRESIDENT | GEN. SECRETARY | TREASURER |

06.05.2019

ಶ್ರೀ ಕೆ.ಸಿ. ನಟರಾಜ್
ಸಂಪಾದಕರು
ಬೃಹಚ್ಚರಣ
ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘ (ರಿ.)
ಬೆಂಗಳೂರು–99.

ಮಾನ್ಯರೇ,

ತಾವು ಅಭಿಮಾನದಿಂದ ಕಳುಹಿಸಿರುವ ಬೃಹಚ್ಚರಣ ಜನವರಿ–ಮಾರ್ಚ್ 2019ರ ಸಂಚಿಕೆಯನ್ನು ನೋಡಿ ಸಂತೋಷವಾಯಿತು. ಪತ್ರಿಕೆಯು ಉತ್ತಮ ಫೋಟೋ ಹಾಗೂ ಅಮೂಲ್ಯ ಲೇಖನಗಳಿಂದ ಕೂಡಿ ಚೆನ್ನಾಗಿ ಮೂಡಿಬಂದಿದೆ. ತಮಗೂ ಹಾಗೂ ಪತ್ರಿಕೆಯ ಬಳಗಕ್ಕೂ ಧನ್ಯವಾದಗಳು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಗೆ ತಮ್ಮ ಪ್ರೋತ್ಸಾಹ ಎಂದಿನಂತಿರಲಿ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

(ಆರ್. ಲಕ್ಷ್ಮೀಕಾಂತ್)
ಹಿರಿಯ ಉಪಾಧ್ಯಕ್ಷರು.



## ಮೋಡಿ ಮಾಡಿದ ಜೋಡಿ
## ಸೋಮು–ಮಣಿ

ಬೃಹಚ್ಚರಣ ಸಮುದಾಯದಲ್ಲಿ ಸೋಮು, ಮಣಿ ಎಂದರೆ ಯಾರಿಗೆ ಗೊತ್ತಿಲ್ಲ? ನಮ್ಮ ಸಂಘ ಪುನರಚಿತಗೊಂಡ ದಿನದಿಂದ ಸತತವಾಗಿ 35 ಸದಸ್ಯರಿಂದ 500ಕ್ಕೂ ಹೆಚ್ಚು ಸದಸ್ಯರಾದದ್ದು, ಠೇವಣಿ 3 ಲಕ್ಷ ರೂ.ಗಳಿಂದ 50 ಲಕ್ಷ ರೂ.ಗಳಾದದ್ದು. ಸಂಘದ ಚಟುವಟಿಕೆಗಳಾದ ನಾಗಾರಾಧನೆ, ಕ್ಯಾಲೆಂಡರ್ ಬಿಡುಗಡೆ, ವಾರ್ಷಿಕ ಪ್ರವಾಸ, ಶಂಕರಜಯಂತಿ, ಶ್ರೀಶ್ರೀನಿವಾಸ ಕಲ್ಯಾಣೋತ್ಸವ, ಗುರುವಂದನಾ ಕಾರ್ಯಕ್ರಮ, ಸತ್ಯನಾರಾಯಣ ಪೂಜೆ, 50 ವರ್ಷ ದಾಂಪತ್ಯ ಪೂರೈಸಿದ ದಂಪತಿಗಳಿಗೆ ಗೌರವ, 75 ವಸಂತ ದಾಟಿದ ಹಿರಿಯರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ, ಸಂಗೀತ, ಮನರಂಜನಾ ಕಾರ್ಯಕ್ರಮಗಳು, ಇದೇ ರೀತಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿ ಸಮುದಾಯದ ಹಿರಿಯರನ್ನು, ಕಿರಿಯರನ್ನು ಒಗ್ಗೂಡುವಂತೆ ಶ್ರಮಿಸಿರುವ ಈ ಜೋಡಿ ಭಲೇ ಜೋಡಿಯೇ ಸರಿ! ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ಸಮಯಕ್ಕೆ ತಕ್ಕಂತೆ ಸಲಹೆ, ಸೂಚನೆಗಳನ್ನು ನೀಡಿದ್ದಲ್ಲದೇ ಅವರಿಂದ ಕಾರ್ಯಗಳನ್ನು ತಮ್ಮ ನಾಯಕತ್ವ ಕೌಶಲತೆಯಿಂದ ಮಾಡಿಸುವಲ್ಲಿ ಎತ್ತಿದ ಕೈ ಇವರದು. ಇವರಿಬ್ಬರೂ ಸಂಘವೆಂಬ ಗಾಡಿಗೆ ಎರಡು ಎತ್ತುಗಳಂತೆ ಸಮನಾಗಿ ಸಂಘವನ್ನು ನಡೆಸಿರುತ್ತಾರೆ.

ಮಣಿ ಎಂದರೆ ನೇರ, ದಿಟ್ಟ ಮಾತು, ಸಮಯಪ್ರಜ್ಞೆ, ದಕ್ಷತೆ ಮತ್ತು ತೀಕ್ಷ್ಣತೆಗೆ ಇನ್ನೊಂದು ಹೆಸರು. ಸಂಘದ ಯಾವುದೇ ಕಾರ್ಯಕ್ರಮದಲ್ಲಿ ಪುರಾಣಗಳ ಉದಾಹರಣೆಗಳನ್ನು ನೀಡಿ ತಮ್ಮ ಭಾಷಣವನ್ನು ಸಭಿಕರು ಮೆಚ್ಚುವಂತೆ ಮಾಡುತ್ತಿದ್ದರು. ಕಿತ್ತಿಗಾನಹಳ್ಳಿ ನಾಗಕ್ಷೇತ್ರದಲ್ಲಿ ನಡೆಯುವ ಸಮುದಾಯದ ಪ್ರತೀ ಕಾರ್ಯಕ್ರಮಗಳಲ್ಲಿ ಮಣಿಯವರು ತನು, ಮನ, ಧನದ ಮೂಲಕ ಪೂರ್ಣ ಸಹಕಾರ ನೀಡುತ್ತಿರುವುದು ಎಷ್ಟೋ ಸದಸ್ಯರಿಗೆ ಗೊತ್ತಿಲ್ಲ. ಪ್ರತಿಯೊಂದರಲ್ಲೂ ಅಚ್ಚುಕಟ್ಟು ಬಯಸುವ ಸಜ್ಜನ, ಸಹೃದಯ, ಸಮಾಜ ಕಳಕಳಿಯ ವ್ಯಕ್ತಿ ಶ್ರೀಮಣಿ ಇವರು ತಮ್ಮ ಕಾರುಚಾಲಕ ರವೀಂದ್ರರವರನ್ನು ಕೂಡ ತನ್ನ ಕುಟುಂಬದ ಒಬ್ಬ ಸದಸ್ಯನಂತೆ ಪ್ರೀತಿಯಿಂದ, ಗೌರವದಿಂದ ನಡೆಸಿಕೊಳ್ಳುವುದು ಇವರ ಹೃದಯ ವಿಶಾಲ್ಯಕ್ಕೆ ಒಂದು ನಿದರ್ಶನ. ಇಂತಹವರು ಸೋಮು ಅಂತಹ ನಾಯಕನೊಂದಿಗೆ ಮಿಳಿತವಾಗಿರುವುದು ಸಂಘಕ್ಕೆ ಒಂದು ಗರಿ ಇಟ್ಟಂತೆ.

ಸ್ವಭಾವತಃ ಸೋಮುರವರು ಸಹೃದಯಿ, ಸೌಮ್ಯ, ಸಮುದಾಯಕ್ಕೆ ಚಿರಪರಿಚಿತ, ಅವರು ನಾಯಕತ್ವಕ್ಕೆ ಮತ್ತೊಂದು ಹೆಸರು. ಯಾವ ಕಾರ್ಯವನ್ನು ಪ್ರಾರಂಭಿಸಿದರೂ ಕೌಶಲ್ಯದಿಂದ ನೆರವೇರಿಸುವಂತಹ ಛಲಗಾರ. ಇದಕ್ಕೆ ಒಂದು ನಿದರ್ಶನ, ಸಂಘದ ಸದಸ್ಯರ ಸಲಹೆಯಂತೆ ಬ್ರಾಹ್ಮಣ ಸಮುದಾಯಕ್ಕೆ ಅನುಕೂಲವಾಗುವಂತಹ ವೈಕುಂಠ ವಾಹನ ಯೋಜನೆಯನ್ನು ಕೆಲವೇ ತಿಂಗಳುಗಳಲ್ಲೇ ಹಣ ಸಂಗ್ರಹಿಸುವುದರ ಮೂಲಕ ಮಾಡಿದ್ದು. ಕಾರ್ಯಕಾರಿ ಸಮಿತಿ ಸದಸ್ಯರೆಲ್ಲರೂ ಸೋಮುರವರ ಮಾರ್ಗದರ್ಶನ ಪಡೆದು ಕಾರ್ಯನಿರ್ವಹಿಸಿದರೆ ಹಿಡಿದ ಕಾರ್ಯ ಜಯಪ್ರದವೇ! ಸೋಮು ಅವರ ವಿಶೇಷತೆ ಏನೆಂದರೆ, ಯಾರೇ ಮರೆತರೂ ತಾವು ಮಾತ್ರ ಹೆಮ್ಮೆಯಿಂದ 'ಬೃಹಚ್ಚರಣ' ಭಾಷೆಯನ್ನು ಪ್ರೀತಿಯಿಂದ ಬಳಸುವುದು, ಸಮುದಾಯದ ಎಲ್ಲರ ಪರಿಚಯವಿರುವ ಸೋಮು ಸಮುದಾಯದವರ ಮನೆಗಳಲ್ಲಾಗುವ ಸುಖ, ದುಃಖಗಳಲ್ಲಿ ಭಾಗಿಯಾಗುವುದು. ಸೋಮುರವರು ಅಧ್ಯಕ್ಷ ಪದವಿಯನ್ನು ಸ್ವಇಚ್ಛೆಯಿಂದ ಇತರರಿಗೂ ಅವಕಾಶ ಸಿಗಲೆಂಬ ಸದುದ್ದೇಶದಿಂದ ಬಿಟ್ಟುಕೊಟ್ಟರೂ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಮುಂದುವರೆಯುತ್ತೇನೆ ಎಂದು ತಿಳಿಸಿರುವುದು ಅವರ ದೊಡ್ಡ ಗುಣ. ಸೋಮು, ಮಣಿ ಯವರ ಜೋಡಿ, ಸಂಘದ ಬೆಳವಣಿಗೆಗೆ ಕಾರಣವಾಗಿರುವುದು ಈಗಿನ ಯುವ ಪೀಳಿಗೆಗೆ ಮಾದರಿ. ಈ ಇಬ್ಬರು ಸಜ್ಜನರಿಗೆ ಹಾಗೂ ಅವರ ಕುಟುಂಬದವರಿಗೆ ಭಗವಂತನು ನೆಮ್ಮದಿ, ಆರೋಗ್ಯ ನೀಡಲೆಂದು ಕೋರುತ್ತೇನೆ.

◆ **ಸರಸ್ವತಿ ನಟರಾಜ್**
◆ **ರಮೇಶ್**

**ವಿವಾಹ**

ಸಂಘದ ಸದಸ್ಯ ಶ್ರೀ ಎಂ.ಆರ್. ಸತ್ಯನಾರಾಯಣ್ ಮತ್ತು ಶ್ರೀಮತಿ ಕುಸುಮಾ ದಂಪತಿಗಳ ಪುತ್ರ **ಚಿ. ಪ್ರಜ್ವಲ್** ರವರ ವಿವಾಹವು ಶ್ರೀಧರ್ ಪಂಡಿತ್ ಮತ್ತು ಚೇತನಾ ಪಂಡಿತರವರ ಮಗಳು **ಚಿ. ಸೌ. ಪ್ರಜ್ವಲಾ**ರವರೊಂದಿಗೆ ದಿನಾಂಕ 20.6.2019ರಂದು ಬೆಂಗಳೂರಿನಲ್ಲಿ ನೆರವೇರಿತು.




ಸ್ವಾಗತ ಕೋರಲು ಸಜ್ಜಾಗಿರುವ ಸಮಿತಿ ಸದಸ್ಯರು





ಪ್ರಾರ್ಥನೆ– ಕು. ಪ್ರಿಯಾ, ಚಿ. ಸಮಾಹಿತ ಹಾಗೂ ಚಿ. ಅರ್ಜುನ್



ನಿರೂಪಣೆ– ಶ್ರೀ ರವಿಕಿರಣ್



ಅಧ್ಯಕ್ಷ – ಶ್ರೀ ಸೋಮಸುಂದರ



ಕಾರ್ಯದರ್ಶಿ – ಶ್ರೀ ವಿ.ಎಸ್. ಮಣಿ



ಖಜಾಂಚಿ – ಶ್ರೀ ಸತ್ಯನಾರಾಯಣ



ಉಪಾಧ್ಯಕ್ಷ – ಶ್ರೀ ಹೆಚ್.ಕೆ. ಶಶಿಧರ್





ನಮ್ಮನ್ನಗಲಿದ ನಮ್ಮವರಿಗೆ ಮೌನ ಶ್ರದ್ಧಾಂಜಲಿ

# ಸರ್ವ ಸದಸ್ಯರ ಸಭೆಯ ಛಾಯಾಚಿತ್ರಗಳು



ಆಯ-ವ್ಯಯ ಮಂಡನೆಗೆ ಸಮ್ಮತಿ



ಹಿರಿಯ ಚೇತನರಿಗೆ ಗೌರವ ಸಮರ್ಪಣೆ





# ಸರ್ವ ಸದಸ್ಯರ ಸಭೆಯ ಛಾಯಾಚಿತ್ರಗಳು

## ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳು







# ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳು








ಸದಸ್ಯರ ಅಭಿಪ್ರಾಯ









ಕಾರ್ಯಕಾರಿ ಸಮಿತಿ ಸಭೆ



ಸಂಘದ ಆದಾರ ಸ್ತಂಭಗಳು

# ವಿಧಿಯ ಹಾವು–ಏಣಿಯಾಟ

ಬದುಕು ಪೂರ್ವ ನಿರ್ಧಾರಿತ ಎಂಬ ಮಾತಿದೆ. ಒಂದು ದಿನ ಸಾವು ಒಬ್ಬನ ಎದುರಲ್ಲಿ ನಿಂತಿತು. "ನಾನು ಸಾವು, ನಿನ್ನ ಆಯಸ್ಸು ಮುಗಿದಿದೆ ನಡೆ" ಎಂದಿತು. "ಅಯ್ಯೋ ಮಾಡಬೇಕು ಎಂದುಕೊಂಡ ಕೆಲಸಗಳು ಹಲವಿದೆ. ಸ್ವಲ್ಪ ಸಮಯ ಕೊಡು ಮುಗಿಸಿಬರುತ್ತೇನೆ" ಎಂದ ಇವ. "ಸಾಧ್ಯವೇ ಇಲ್ಲ. ಕೇವಲ ಹತ್ತು ನಿಮಿಷ ಉಳಿದಿದೆ, ಮುಗಿಸಿ ಹೊರಡಲೇಬೇಕು" ಎಂದಿತು ಸಾವು. "ಸರಿ, ಕಾಫಿ ಮಾಡುತ್ತೇನೆ, ಕುಡಿದು ಹೊರಡುವ. ನೀನು ಚೂರು ರುಚಿ ನೋಡು" ಎಂದ ಇವ. "ಬೇಗ ಬೇಗ, ನೀನು ಯಾದಿಯಲ್ಲಿ ಮೊದಲನೆಯವ. ಇನ್ನು ಹಲವು ಮಂದಿಯನ್ನು ಒಯ್ಯುವುದಿದೆ" ಎಂದಿತು ಸಾವು.

ಇವ ಕಾಫಿ ತಯಾರಿಸಿ, ಅದರಲ್ಲಿ ನಿದ್ರೆ ಮಾತ್ರೆ ಸೇರಿಸಿ ಸಾವಿನ ಕೈಯಲ್ಲಿ ಇಟ್ಟ. ಕುಡಿದ ಸಾವು ಗಾಢ ನಿದ್ರೆ ಹೋಯಿತು. ಕೂಡಲೇ ಇವ ಅದರ ಕೈಯಲ್ಲಿ ಇದ್ದ ಸಾಯುವವರ ಪಟ್ಟಿಯನ್ನು ತೆಗೆದು ನೋಡಿದ. "ಹೌದು ನನ್ನ ಹೆಸರು ಸರತಿಯ ಮೊದಲಲ್ಲಿದೆ." ಅದನ್ನು ಹೊಡೆದು, ಸರತಿಯ ಕೊನೆಗೆ ಸೇರಿಸಿದ. ಸ್ವಲ್ಪ ಸಮಯದ ನಂತರ ಸಾವು ಎಚ್ಚರಗೊಂಡಿತು. ಇವ ನಿಂತೇ ಇದ್ದಾನೆ. "ನಿನ್ನ ಕಾಫಿ ದಿವ್ಯವಾಗಿತ್ತು. ಕೃತಜ್ಞತೆಗಳು. ಕೃತಜ್ಞತಾಪೂರ್ವಕವಾಗಿ ಇಂದು ನಾನು ಕರೆದೊಯ್ಯುತ್ತಿರುವ ಪಟ್ಟಿಯಲ್ಲಿ ಸ್ವಲ್ಪ ಬದಲಾವಣೆ ಮಾಡುತ್ತೇನೆ. ಅರರೇ, ನಿನ್ನ ಹೆಸರು ಕಡೆಗೆ ಹೋಗಿದ್ದು ಹೇಗೆ?" ಎಂದು ಸಾವು ಹೇಳುತ್ತಿರುವಂತೆ ಇವನು ಮೂರ್ಛೆ ಹೋಗಿದ್ದ.

ನಸುನಗುತ್ತಾ ಸಾವು "ವಿಧಿ ಎಂದರೆ ಇದು. ನಾನು ಸಹಾಯ ಮಾಡಬೇಕೆಂದರೂ ಮಾಡಲಾರೆ. ಇದು ಪ್ರಕೃತಿ ನಿಯಮ. ಪೂರ್ವ ನಿರ್ಧಾರಿತ" ಎಂದು ಹೇಳುತ್ತಾ ಪಾಶದಿಂದ ಇವನನ್ನು ಬಂಧಿಸಿತು. ಕಾಯುವವನೂ ಅವನೇ, ಕೊಲ್ಲುವವನೂ ಅವನೇ, ದೇವರು ಎನ್ನಿ, ಭಗವಂತ ಎನ್ನಿ, ಪ್ರಾರಬ್ಧ ಏನು ಬೇಕಾದರೂ ಹೆಸರಿಸಿ. ಅವನೆಂದಂತೆ ನಡೆ.

* * *

1912 ಏಪ್ರಿಲ್ ಹತ್ತರಂದು ಒಂದು ಐತಿಹಾಸಿಕ ಘಟನೆ ನಡೆಯುವುದರಲ್ಲಿತ್ತು. ಅಂದು ಇದರ ಬಗ್ಗೆ ಎಷ್ಟು ಪ್ರಚಾರ ನಡೆದಿತ್ತೆಂದರೆ, ಪ್ರತಿಯೊಬ್ಬ ಬ್ರಿಟೀಷ್ ಪ್ರಜೆಯೂ ಪ್ರಯಾಣಿಸುವ ಕನಸು ಕಾಣುತ್ತಿದ್ದ. ಮನೆ–ಮಠ ಮಾರಿಯಾದರೂ, ಜೀವಮಾನದ ಉಳಿತಾಯವನ್ನು ವ್ಯಯಿಸಿಯಾದರೂ ಈ ಪ್ರಯಾಣಕ್ಕೆ ಅನುವಾದವರು ಎಷ್ಟೋ ಮಂದಿ. ಈ ಕನಸು ಕಂಡವರಲ್ಲಿ ಕ್ಲರ್ಕ್ ಕುಟುಂಬವೂ ಒಂದು.

ಮಿಸ್ಟರ್ ಕ್ಲರ್ಕ್ ತನ್ನ ಉಳಿತಾಯ ಪೂರ್ತಿ ವ್ಯಯಿಸಿ ತನ್ನ ಕುಟುಂಬಕ್ಕೆ ಹಡಗಿನಲ್ಲಿ ನ್ಯೂಯಾರ್ಕ್ ನಗರಕ್ಕೆ ತೆರಳಲು ಟಿಕೇಟ್ ಖರೀದಿಸಿದ. ಗಂಡ–ಹೆಂಡತಿ, ಐದು ಮಂದಿ ಮಕ್ಕಳು. ಈ ನ್ಯೂಯಾರ್ಕ್ ನಗರಕ್ಕಾಗಿ ಹೊರಡುವ ಪ್ರಯಾಣದ ತಯಾರಿ ನಡೆಸತೊಡಗಿದರು. "ತಾನೊಂದು ಬಗೆದರೆ ದೈವವೊಂದು ಬಗೆಯಿತು" ಎಂಬ ಮಾತಿದೆ. ಹೊರಡುವ ನಾಲ್ಕು ದಿನಗಳ ಮೊದಲು ಕ್ಲರ್ಕ್ ಮೂರನೆಯ ಮಗನನ್ನು ನಾಯಿ ಕಚ್ಚಿತು. ರಕ್ತ ಒಸರುವ ಆಳವಾದ ಗಾಯ ಗಳಾಗಿತ್ತು. ಒಂದು ನೋಟ ಹರಿಸಿದ ವೈದ್ಯರು "ಹುಡುಗನನ್ನು ಚಿಕಿತ್ಸಾಲಯಕ್ಕೆ ಭರ್ತಿಮಾಡಬೇಕು. ಏಕೆಂದರೆ ನಾಯಿಯ ಬಾಯಿಂದ ಇವನ ರಕ್ತ ಸೇರಿದ ವಿಷಾಣುಗಳು ಗಂಭೀರ ಪರಿಣಾಮಬೀರುವ ಸಾಧ್ಯತೆ ಇದೆ. ಸಾವು ಸಂಭವಿಸಲೂ ಬಹುದು. ಅಂಥಹ ಸಂದರ್ಭ ಬಂದರೆ ಇವನಿಗೆ ತುರ್ತು ವೈದ್ಯಕೀಯ ಸಹಾಯ ನೀಡಬೇಕಾಗುತ್ತದೆ. ಇವನಂತೂ ದೀರ್ಘ ಪ್ರಯಾಣಕ್ಕೆ ಯೋಗ್ಯನಲ್ಲ" ಎಂದು ಬಿಟ್ಟರು.

ಮಿಸ್ಟರ್ ಕ್ಲರ್ಕ್ ಕಂಗಾಲಾದರು. ಜೀವಮಾನದ ಗಳಿಕೆಯನ್ನು ಈ ಪ್ರಯಾಣಕ್ಕೆ ಸಂದಾಯ ಮಾಡಿ ಆಗಿದೆ ಮತ್ತು ಈ ಮೊತ್ತ ಮರಳಿಸುವುದಿಲ್ಲ.


ಇವನ ನಿರಾಸೆ ಕಂಡ ಇವನ ಪತ್ನಿ ಒಂದು ಸಲಹೆ ನೀಡಿದರು. "ನಾನು ಮಗನೊಂದಿಗೆ ಹಿಂದುಳಿಯುತ್ತೇನೆ. ನೀವು ಐದು ಮಂದಿ ಮುಂದುವರಿಸಿ" ಎಂದರು. ಆದರೆ ಜೀವ ಅಪಾಯದಲ್ಲಿರುವ ಮಗ ಮತ್ತು ಪತ್ನಿಯನ್ನು ಬಿಟ್ಟು ತಾವು ಮಾತ್ರ ಹೋಗಲು ಕ್ಲರ್ಕ್ ಮನಸ್ಸು ಒಪ್ಪಲಿಲ್ಲ.

1912 ಏಪ್ರಿಲ್ ತಿಂಗಳ ಹತ್ತನೆಯ ತಾರೀಖಿನ ಬೆಳಗ್ಗೆ ಟೈಟಾನಿಕ್ ಇಂಗ್ಲೇಂಡ್ ತೀರದಿಂದ ನ್ಯೂಯಾರ್ಕ್ ನಗರಕ್ಕಾಗಿ ಹಡಗು ಹೊರಟಿತು. ಅಟ್ಲಾಂಟಿಕ್ ಸಾಗರದ ಉತ್ತರ ಭಾಗದಲ್ಲಿ ಪ್ರಯಾಣಿಸುವುದಿತ್ತು. ಕ್ಲರ್ಕ್ ಕುಟುಂಬ ಅಶ್ರುಭರಿತ ಕಣ್ಣುಗಳಿಂದ ಹಡಗು ದೂರದ ಬಾನು–ಭುವಿ ಸೇರುವಲ್ಲಿ ಮರೆಯಾಗುವುದನ್ನು ನೋಡುತ್ತಾ ನಿಂತಿತು. ಐದು ದಿನಗಳು ಕಳೆದವು. ಐದು ದಿನಗಳು ಕ್ಲರ್ಕ್ ಕುಟುಂಬದಲ್ಲಿ ಸೂತಕ ಕಳೆ ಸುರಿಯುತ್ತಿತ್ತು. ಆರನೆಯ ದಿನ ಬೆಳಗ್ಗೆ ಒಂದು ಸುದ್ದಿ ಬಂತು. ಸುದ್ದಿ ಕೇಳಿದ ಕುಟುಂಬ ನಡುಗಿಹೋಯಿತು.

ಹಡಗು ನಾಲ್ಕನೆಯ ದಿನ ರಾತ್ರಿಯ ಕತ್ತಲಲ್ಲಿ ಹಿಮಗಡ್ಡೆ ಯೊಂದಕ್ಕೆ ಬಡಿಯಿತು. ಸಮಯ ಮಧ್ಯರಾತ್ರಿ ಎರಡು ಗಂಟೆ ಇಪ್ಪತ್ತು ನಿಮಿಷ. ಪ್ರಯಾಣಿಕರು ಗಾಢ ನಿದ್ರೆಯಲ್ಲಿದ್ದರು. ಹಡಗು ಬಿರುಕುಬಿಟ್ಟಿತು. ಹೆಪ್ಪುಗಟ್ಟುವಷ್ಟು ಶೀತಲವಾಗಿದ್ದ ನೀರು ಹಡಗಿನೊಳಕ್ಕೆ ನುಗ್ಗಿತು. ಪ್ರಯಾಣಿಕರನ್ನು ರಕ್ಷಿಸುವ ಪ್ರಯತ್ನ ಮಾಡಿದರು. ಮೊದಲ ಆದ್ಯತೆ ಮೊದಲನೆ ದರ್ಜೆ ಯವರಿಗೆ ತಾನೇ. ಎರಡನೇ ಹಾಗೂ ಮೂರನೇ ದರ್ಜೆ ಯವರು ಇದ್ದ ಕಡೆಯೇ ಮುಳುಗಿ ಹೆಪ್ಪುಗಟ್ಟಿ ಸತ್ತರು. ಕ್ಲರ್ಕ್ ಕುಟುಂಬ ಮೂರನೆಯ ದರ್ಜೆಯಲ್ಲಿರಬೇಕಾಗಿತ್ತು. ವಿಧಿ ಎನ್ನಿ ಅಥವಾ ಭಗವಂತ ಎನ್ನಿ ನಾಯಿಯ ರೂಪದಲ್ಲಿ ಬಂದು ಇವರನ್ನು ರಕ್ಷಿಸಿದ್ದ!

◆ ಎಸ್. ಶ್ರೀನಿವಾಸಯ್ಯ

# ಮಂಕುತಿಮ್ಮನ ಕಗ್ಗ – ತಾತ್ಪರ್ಯ



**ಘನ ತತ್ತ್ವವೊಂದಕ್ಕೆ ದಿನರಾತ್ರಿ ಮನ ಸೋತು**
**ನೆನೆಯದಿನ್ನೊಂದ ನೆಲ್ಲವ ನೀಡುತದರಾ ।**
**ಅನುಸಂಧಿಯಲಿ ಜೀವ ಭಾರವನು ಮರೆಯುವುದು**
**ಹನುಮಂತನುಪದೇಶ –ಮಂಕುತಿಮ್ಮ ॥**

ರಾಮಸೇವೆ ಎಂಬ ಘನ ತತ್ವಕ್ಕೆ ಮಹಾ ಸಂಕಲ್ಪಮಾಡಿ ಅನುದಿನವೂ ಮನಸ್ಸನ್ನೂ ಕೊಟ್ಟು ಬೇರೆ ಯಾವ ಚಿಂತನೆಯನ್ನೂ ಮಾಡದೆ ಅವನ ಧ್ಯಾನದಲ್ಲೇ ಬದುಕು ಸವೆಸಿದ ಮಹಾಭಕ್ತ ಶ್ರೀ ಆಂಜನೇಯಸ್ವಾಮಿ ತನ್ನೊಬ್ಬನ ಸ್ವಾರ್ಥಕ್ಕಾಗಿ ಬದುಕನ್ನು ಬಯಸದೆ ಹಿರಿಯದಾದ ಮಹತ್ವದ್ದಾದ ಒಂದು ಕಾರ್ಯಕ್ಕಾಗಿ ಜೀವನವನ್ನು ನಡೆಸಿ ಸಾರ್ಥಕತೆಯಾಗಿಸಿದ. ಕೃತಕೃತ್ಯನಾದ. ಅವನ ಜೀವನ ಅವನಿಗೆ ಭಾರವೆನಿಸಲಿಲ್ಲ. ಘನತತ್ವಕ್ಕೆ ಶರಣಾಗಿ ಜೀವನವನ್ನು ತೇಯುವುದೇ ಸಫಲತೆಗೆ ದಾರಿ ಎಂದು ಜನರಿಗೆ ಮಾರ್ಗದರ್ಶನ ಮಾಡಿದ ಗುರು ಹನುಮಂತ. ಇದೇ ಹನುಮನ ಉಪದೇಶ.

ಮನುಷ್ಯನ ಜೀವನದಲ್ಲಿ ಯಾವುದಾರೂ ಒಂದು ಗುರಿ ಇರಬೇಕು. ಮನೆ ಕಟ್ಟಲೆಂದೋ, ವಿದ್ಯಾರ್ಜನೆಯೋ, ಲಲಿತ ಕಲೆಗಳಲ್ಲಿ ಯಾವುದಾದರೂ ಒಂದನ್ನೂ ಕಲಿಯಬೇಕು. ಸೇವಾ ಮನೋಭಾವ ಹೀಗೆ ಎಷ್ಟೋ ಬಗೆಯ ಗುರಿ ಅಥವಾ ಆಸೆಗಳಿರುತ್ತವೆ. ಆ ಗುರಿಯನ್ನು ಮುಟ್ಟಿದಾಗ ಆನಂದವಾಗುತ್ತದೆ. ಆಗಲೇ ಅವನ ಬದುಕಿಗೆ ಸಾರ್ಥಕತೆ. ಆ ಗುರಿ ತಲುಪಬೇಕಾದರೆ ತಾಳ್ಮೆ, ಸತತ ಕೃಷಿ, ನಿರಂತರ ಸಾಧನೆ ಇರಬೇಕು. ಗುರಿ ಎಂದರೆ ಒಳ್ಳೆಯ ರೂಪ. ನಾನು ನನ್ನದು ಎಂಬುದನ್ನು ಮರೆತು ಸಾಧಿಸ ಬೇಕಾದ ಒಂದು ವಿಚಾರ. ಇದೆಲ್ಲಾ ಸಾಮಾನ್ಯ ಮನುಷ್ಯರಿಗೆ ಸಂಬಂಧಪಟ್ಟ ವಿಚಾರ.

ಆದರೆ ಕೆಲವು ಮಹನೀಯರುಗಳ ಗುರಿ ಧ್ಯೇಯವೇ ಬೇರೆ ಮೇಲ್ಮಟ್ಟದ ವಿಚಾರ "ಎಂದರೋ ಮಹಾನುಭಾವಲು ಅಂದರಿಕಿ ವಂದನಮುಲು" ಎಂದು ತ್ಯಾಗರಾಜರು ಉನ್ನತ ಮಟ್ಟದ ಮಹಾತ್ಮರುಗಳಿಗೆ ತಮ್ಮ ವಂದನೆಯನ್ನು ಗಾನದ ಮೂಲಕ ತಿಳಿಸಿದ್ದಾರೆ, ಮನಮುಟ್ಟಿಸಿದ್ದಾರೆ. ಅವರುಗಳ ಶ್ರೇಷ್ಠವಾದ ಗುರಿ ಎಂದರೆ ಬ್ರಹ್ಮನನ್ನು ಕಂಡ ಗುರಿ ಬ್ರಹ್ಮಾನಂದವನ್ನು ಅನುಭವಿಸಿದ ಗುರಿ. "ನೆಲಯಾದಿ ಕೇಶವನ ಧ್ಯಾನವನ್ನು, ಮನ ಮುಟ್ಟಿ ಮಾಡುವುದು ಮುಕ್ತಿಗಾಗಿ, ಭಕ್ತಿಗಾಗಿ, ಆನಂದಕ್ಕಾಗಿ. ಆತ್ಮಾನಂದಕ್ಕಾಗಿ" ಇಂಥ ಮಹಾತ್ಮರು ಭಗವಂತನನ್ನು ದರ್ಶನ ಮಾಡಲೆಂದೇ ಬಾಳಿ ಬದುಕಿ ಭಾಗ್ಯವಂತರಾಗಿದ್ದಾರೆ.

ಬಾಳಿನಲ್ಲಿ ಬರುವ ಆಸೆ, ಆಕಾಂಕ್ಷೆ ಆಮಿಷಗಳನ್ನೆಲ್ಲಾ ಅದುಮಿ ಅಂತರಂಗದ ಸತ್ವದಿಂದ ಇಂದ್ರಿಯಗಳನ್ನು ನಿಗ್ರಹಿಸಿ ಕಠಿಣವಾದ ತಪಶ್ಚರ್ಯಯನ್ನು ಮಾಡಿದವರು ಈ ಮಹನೀಯರುಗಳು. ಅಪಾಯ ಬಂದಾಗ ಆಮೆ ಹೇಗೆ ತನ್ನ ತಲೆ ಕಾಲು ಮುಂತಾದ ಅವಯವಗಳನ್ನು ತನ್ನೊಳಗೆ ಎಳೆದುಕೊಳ್ಳುತ್ತದೆಯೋ, ಅಂತೆಯೇ ತಮ್ಮ ಇಂದ್ರಿಯಗಳನ್ನು ಉದ್ರೇಕಿಸುವ ವಿಷಯಗಳಿಂದ ತನ್ನೊಳಗೆ ಸೆಳೆದುಕೊಂಡು ವಿಷಯ ಸ್ಪರ್ಶವಿಲ್ಲದಂತೆ ಮಹಾತ್ಮರು ಬಾಳುತ್ತಾರೆ. ಇಂತಹ ಮಹಾತ್ಮರು ಜೀವನದ ನಿಜವಾದ ಅರ್ಥವನ್ನು ಹುಡುಕಿ ಆನಂದ, ಶಾಂತಿ, ತೃಪ್ತಿಗಳನ್ನು ಗಳಿಸಿಕೊಂಡವರು.

ಡಾ॥ ಡಿ.ವಿ.ಜಿ. ಅವರು ಇಂತಹ ಎಷ್ಟೋ ಮಹನೀಯರುಗಳ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೇ ಉದಾಹರಣೆ ಶಬರಿ.

ಶ್ರೀರಾಮನ ವನವಾಸದುದ್ದಕ್ಕೂ ಅನೇಕ ಜೀವಿಗಳು ಶ್ರೀರಾಮನನ್ನೂ ದರ್ಶಿಸಿ ಧನ್ಯರಾದವರು. ಅದರಲ್ಲಿ ಶಬರಿಯೂ ಒಬ್ಬಳು. ಮತಂಗ ಮಹಾ ಮುನಿಗಳ ಮಾತಿನಂತೆ ತಾನು ಶ್ರೀರಾಮನ ದರ್ಶನ ಮಾಡುತ್ತೇನೆಂದು ತಿಳಿದು ಅವನಿಗಾಗಿ ದಿನದಿನವೂ ತಪಿಸಿ ಕಾದು ಅವನಿಗಾಗಿ ಹಣ್ಣುಗಳನ್ನು ತಂದು ರುಚಿಯಾಗಿರಬೇಕೆಂದು ಮೊದಲು ತಾನು ತಿಂದು ಎಂಜಲು ಹಣ್ಣನ್ನು ರಾಮನಿಗೆ ಇಡುತ್ತಿದ್ದಳು. ಆಗ ಅವಳಿಗೆ ಅದು ಎಂಜಲು ಎಂಬ ಭಾವನೆ ಇರಲಿಲ್ಲ, ಏಕೆಂದರೆ ಶ್ರೀರಾಮಚಂದ್ರನಿಗೆ ಸಿಹಿಯಾದ ಫಲ ಅರ್ಪಿಸುವುದೇ ಅವಳ ಧ್ಯೇಯ. ಕವಿಯೊಬ್ಬರು ಬಹಳ ಮನೋಜ್ಞವಾಗಿ ಕವಿತೆಯನ್ನು ಬರೆದಿದ್ದಾರೆ. ಕಾದಿರುವಳು ಶಬರಿ ಶ್ರೀರಾಮ ಬರುವನೆಂದು ಶ್ರೀರಾಮ ಬರುವನೆಂದು, ತನ್ನ ಪೂಜೆಗೊಳುವೆನೆಂದು "ವನವನವ ಸುತ್ತಿ ಸುಳಿದು, ತರುತರುವನಲೆದು ತಿಂದು, ಬಿರಿದ ಹೂಗಳಾಯ್ದು ತಂದು, ತನಿವಣ್ಣಳಾಯ್ದು ತಂದು" ಹೀಗೆ ಕಾದೇ ಇದ್ದಳು ರಾಮನ ಬರವಿಗಾಗಿ. ಬಹಳ ದಿನಗಳಾದರೂ ಶ್ರೀರಾಮ ಬರಲೇ ಇಲ್ಲ. ಕಾದು ಕಾದು ಹಂಬಲಿಸಿ ನನ್ನ ಕಂಗಳು ಇಂಗಿ ಹೋಗುವುದರೊಳಗೆ ಬಾರ ಎಂದು ನೊಂದು ಆತ್ಮದಿಂದ ಪರಿತಪಿಸುತ್ತಿದ್ದಳು.

"ಬಾ ರಾಮ ಬಾರ ಬಾರ ಬಡವರನು ಕಾಯ ಬಾರ ಕಂಗಾಣ ದಿವರ ಪ್ರೇಮ ನುಡಿಸೋತ ಮೂಕ ಪ್ರೇಮ." ಕಡೆಗೆ ಶ್ರೀರಾಮಚಂದ್ರನು ಬಂದನು, ಹಣ್ಣು ಹೂವುಗಳನ್ನು ಕೊಟ್ಟು ಉಪಚರಿಸಿದಳು. ಅವನ ದರ್ಶನ ಮಾಡಿ ಧನ್ಯಳಾದಳು. ಶಬರಿ ಅವನಿಗಾಗಿ ಕಾದು ಅವನನ್ನೇ ಅನುಗಾಲವೂ ಚಿಂತಿಸಿ ಅನುಸಂಧಾನ ಮಾಡಿದ ಭಕ್ತೆ ಶಬರಿ.

ಅಂತೆಯೇ ಭಕ್ತವರ ಹನುಮಂತನೂ ಒಬ್ಬ ರಾಮಸೇವೆ ಎಂಬ ಮಹಾ ಘನ ಗೌರವವಾದ ತತ್ವಕ್ಕೆ ಅಹರ್ನಿಶಿ ಮನಸ್ಸನ್ನು ಕೊಟ್ಟು ಬೇರೆ ಏನನ್ನೂ ನೆನೆಯದೆ ಅವನ ಧ್ಯಾನದಲ್ಲೇ ಬದುಕುಸನೆಸಿದ ಧೀಮಂತ ನಿಸ್ವಾರ್ತತೆಯಿಂದ

ಕಾರ್ಯಗಳನ್ನು ಕರ್ಮಯೋಗಿ, ಭಕ್ತಿಯನ್ನು, ಕರ್ಮವನ್ನು ಯೋಗವನ್ನಾಗಿ ಮಾಡುವ ಕಲೆಯನ್ನು ಅರಿತಿದ್ದ. ಮಹಾ ನಿರ್ವಾಣ ಮಾನವತ್ವದಿಂದ ದೇವತ್ವಕ್ಕೇರಿದ ಮಹಾನುಭಾವ ಮಹಾರುದ್ರನ ಅಂಶಾವತಾರಿಯಾದ ಮಾರುತಿ ಮಹಾ ವಿಷ್ಣುವಿಗೆ ಅತ್ಯಂತ ಪ್ರಿಯನು. ಜ್ಞಾನದಲ್ಲಿ ಭಗವತ್ ಯೋಗ ವನ್ನೂ ಜೋಡಿಸುವ ಕಲೆಯನ್ನು ಅರಿತ ಆಚಾರ್ಯ. ತನ್ನ ಅಂತಃಶಕ್ತಿ, ಚೈತನ್ಯಗಳನ್ನೆಲ್ಲಾ ಶ್ರೀರಾಮಚರಣದಲ್ಲಿ ಅರ್ಪಿಸಿದ ನಿರಹಂಕಾರ ದಿವ್ಯ ಶ್ರೇಷ್ಠ ವ್ಯಕ್ತಿ. ಪ್ರಾಣ ರಕ್ಷಣೆಗಾಗಿ ಸಂಜೀವಿನಿ ಪರ್ವತವನ್ನೇ ಹೊತ್ತು ತಂದ ಬೃಹತ್ ಸ್ವರೂಪಿ "ನತಮಸ್ತ ಕಾಂಜಲಿ" ಶ್ರೀರಾಮ ಎನ್ನುವಾಗಲೇ ಮೈರೋಮಾಂಚನ ವಾಗಿ ಭಾಷ್ಪಾವಾರಿ ಪರಿಪೂರ್ಣ ಲೋಚನನಾಗಿ ಆನಂದ ಭಾಷ್ಪವನ್ನು ಸುರಿಸಿದ ಮೈ ಮರೆತ ಮಹಾವ್ಯಕ್ತಿ. "ದಾಸೋಹಂ ಕೋಸಲೇಂದ್ರಸ್ಯ" ಎನ್ನುತ್ತಾ "ರಾಮನಾಮದ ಮಾಲೆ ನವರತ್ನ" ನಾಗುತ್ತಾ ಅಸಾಧ್ಯ ಸಾಧಕಂ ಸ್ವಾಮಿ ಅಸಾಧ್ಯಂ ತವ ಕಿಂ ವದ" ಎನ್ನುವಂತೆ ಮಹಾ ಸಾಗರವನ್ನು ದಾಟಿ ಸೀತಾ ಮಹಾ ಮಾತೆಯನ್ನು ಕಂಡು ಶ್ರೀರಾಮನಿಂದ ತಂದ ಉಂಗುರವನ್ನು ಅವಳಿಗೆ ಅರ್ಪಿಸಿ, ಸೀತೆಯಿಂದ ಚೂಡಾಮಣಿಯನ್ನು ತಂದು ರಾಮನಿಗೆ ಅರ್ಪಿಸಿ. ಪರಸ್ಪರ ಶುಭಸಂದೇಶವನ್ನು ತಲುಪಿಸಿದ ಸುಂದರ ಹನುಮ ಲಂಕಾದಹನ ಮಾಡಿ ಹಿಂತಿರುಗಿದಾಗ ಸೀತೆ ಎಂದ ತಕ್ಷಣ ಏನಾಯಿತೋ ಎಂದು ರಾಮನಿಗೆ ಭಯವಾಗುತ್ತದೆಂದು "ಸಿಕ್ಕದಳು ಸೀತೆ" ಎಂದು ಸಮಯ ಪ್ರಜ್ಞೆಯಿಂದ ರಾಮನಿಗೆ ತಿಳಿಸುವ ಅವನ ಮಾತು ಸೂಕ್ಷ್ಮತೆಯಿಂದ ಕೂಡಿ ವಾಕ್ಚಾತುರತೆಯನ್ನು ತಿಳಿಸುತ್ತಿದೆ. ಹನುಮಂತನ ರೋಮ ರೋಮವೂ ಶ್ರೀರಾಮ ನಾಮದಿಂದ ಕೂಡಿದೆ "ರಾ" ಎಂದ ಮಾತ್ರದೊಳು ಆಯಸ್ತಿಗತವಾದ ಪಾಪ ಹೊರಟು ಹೋಗಿ ಮತ್ತೆ "ಮಾ" ಎನಲು ಹೊರ ಬಿದ್ದ ಪಾಪಗಳು ಮತ್ತೆ ಒಳ ಹೋಗದಂತೆ ಕವಾಚವಾಗಿತ್ತು. ಚಿತ್ತಕಾಯಗಳ ಪವಿತ್ರ ಮಾಡುವ ಪರಿಯ ಭಕ್ತವರ ಹನುಮಂತನು ಒಬ್ಬನೇ ಬಲ್ಲವನಾಗಿದ್ದನು.

ರಾಮ ನಾಮ ಎಂಬ ಮಹಾ ಧ್ಯೇಯಕ್ಕೆ ಒಳಗಾಗಿ ಶರಣಾಗಿ ಅದಕ್ಕಾಗಿ ಜೀವ ತ್ಯಾಗ ಮಾಡುವುದೇ ಸಫಲತೆ ಎಂದು ಕಂಡುಕೊಂಡ ದಾರ್ಶನಿಕನು. ಇದು ಕೇವಲ ಅನುಸಂಧಾನದಿಂದ ಮಾತ್ರ ಸಾಧ್ಯ ಎಂದು ಉಪದೇಶಿಸಿದ್ದಾನೆ.

ಹನುಮಂತನ ಜೀವನ ನಮಗೆ ಆದರ್ಶ. ಗಾನಯೋಗಿ, ಚಿರಂಜೀವಿ, ನವವ್ಯಾಕರಣ ಪಂಡಿತ ಭವಿಷ್ಯದ ಬ್ರಹ್ಮ, ಸೂರ್ಯನ ಪಟ್ಟ ಶಿಷ್ಯ, ಇಚ್ಛಾರೂಪಿ ಸುಗ್ರೀವ ಸಚಿವ ಇಷ್ಟೆಲ್ಲಾ ಗುಣಗಳಿಂದ ಕೂಡಿದ ಹನುಮಂತ ಸರ್ವಗುಣ ಸಂಪನ್ನನಾದ ಶ್ರೀರಾಮಚಂದ್ರನನ್ನು ಕಂಡ ತಕ್ಷಣ ದಾಸೋಹಂ ರಾಮಚಂದ್ರಸ್ಯ ಎಂದು ಅವನ ಪಾದ ಸೇವೆ ಮಾಡಿ ಬಾಳು ಸಾರ್ಥಕ ಮಾಡಿಕೊಂಡ ಧನ್ಯಜೀವಿ. ಯಾವುದು ಹಿರಿಮೆ ಗರಿಮೆಗಳಿವೆಯೋ ಅದಕ್ಕೆ ತನ್ನನ್ನು ಅರ್ಪಿಸಿಕೊಂಡಾಗಲೇ ಎಲ್ಲವೂ ಸಿದ್ಧಿಸುವುದು, ಇದು ಅನು ಸಂಧಾನದಿಂದ ಮಾತ್ರ ಸಾಧ್ಯ ಎಂದು ವಿನಯದಿಂದ ಉಪದೇಶಿಸಿದ್ದಾನೆ.

ಬುದ್ಧಿರ್ಬಲಂ ಯಶೋಧೈರ್ಯಂ ನಿರ್ಭಯತ್ವಂ ಅರೋಗತಾ ಅಜಾಡ್ಯಂವಾಕ್ಪಟು ತ್ವಂಚ ಹನುಮತ್ ಸ್ಮರಣಾತ್ ಭವೇತ್". ಬನ್ನಿ ಪವಿತ್ರಾತ್ಮನಾದ ಪವಮಾನನನ್ನು ಪ್ರಾರ್ಥಿಸಿ ನಾವೂ ಪವಿತ್ರರಾಗೋಣ.

◆ ಜಿ.ಪಿ. ಲಕ್ಷ್ಮೀದೇವಿ
23444798

## ನೆನಪಿನಂಗಳದಲ್ಲಿ ಚಿತ್ರ 39



ಸಮುದಾಯದ ದಿ। ಶ್ರೀಕಂಠಶರ್ಮರವರ ಮೊಮ್ಮಗಳು ಹಾಗೂ ದಿ। ಶಂಕರ ಮತ್ತು ಶ್ರೀಮತಿ ಲೀಲಾರವರ ಪುತ್ರಿ ಶ್ರೀಮತಿ ಪದ್ಮ–ಶ್ರೀ ರಮೇಶ್‌ರವರ ವಿವಾಹ ಸಂದರ್ಭ 1977

## INTERNATIONAL YOGA DAY

**Why Yoga?**

The basic nature of human being when he is born is **bliss**, but as one grows up we get far too distracted with our own mind and body and material objects. We lose sight of this **fundamental truth**. There is a false identification which we carry throughout our life. **Yoga** seeks to provide us with a way to remove this identification which is ignorance and become aware of the true divine self.

**Why do we celebrate International Yoga Day?**

Yoga is an invaluable gift of India's ancient tradition and it embodies the unity of mind and body. The practice is considered to be almost 5000 years old. Yoga developed as a way to achieve harmony and balance between the heart and soul and to achieve divine enlightenment.

In the recent decades Yoga became really popular outside of India and many other cultures have embodied yoga in them.

In September 2014, P.M. while addresing the UN general assembly.

**"Yoga is an invaluable gift of India's ancient tradition. It embodies the unity of mind and body: thought and action; restraint and fulfilment; harmony between man and nature; a holistic approach to health and well-being. It is not about exercise but to discover the sense of oneness within you".**

The United Nations General Assembly on December 11, 2014 announced that June 21 would be observed as `International Yoga Day' or World Yoga Day. Since 2015, International Yoga Day is being celebrated world wide with lots of enthusiasm and divinity. The reason behind why this day was chosen was 21st June is considered as the longest day of the year and shares a special significance in many parts of the world.

* * *

What is spiritual maturity?

1. Spiritual Maturity is **when you stop trying to change others, instead focus on changing yourself.**
2. Spiritual Maturity is when you **accept people as they are.**
3. Spiritual Maturity is when you **understand everyone is right in their own perspective.**
4. Spiritual Maturity is when you **learn to let go**.
5. Spiritual Maturity is when **you are able to drop "expectations" from a relationship and give for the sake of giving.**
6. Spiritual Maturity is when you **understand whatever you do, you do for your own peace.**
7. Spiritual Maturity is when you **stop proving to the world, how intelligent you are.**
8. Spiritual Maturity is when you **don't seek approval from others.**
9. Spiritual Maturity is when you **stop comparing with others.**
10. Spiritual Maturity is when you **are at peace with yourself.**
11. Spiritual Maturity is when you **are able to differentiate between "need" and "want" and are able to let go of your wants.**
12. You gain Spiritual Maturity when you **stop attaching "happiness" to materialistic things!!**



◆ **Supriya Murali**

# ಅಷ್ಟಾವಕ್ರ



**ಯಾ**ವುದೋ ಮುಖ್ಯವಾದ ಕೆಲಸ. ನಮ್ಮ ಪಾಡಿಗೆ ಹೋದವಾ, ಬಂದ್ವಾ ಅನ್ನೋದಿಲ್ಲ, ಇನ್ಯಾರನ್ನೋ ಜೊತೆಗೆ ಕರಕೊಂಡು ಹೋಗೋದು. ಅಲ್ಲಿ ಏನೋ ಮಾಡೋಕೆ ಹೋಗೋದು, ಅದು ಇನ್ನೇನೋ ಆಗೋದು. ಸರಿ, ಹೋದ ಕೆಲಸ ಆಗದೆ, ಖಾಲಿ ಕೈಯಲ್ಲಿ ಮನೆಗೆ ಬಂದು ಹೆಂಡತಿ ಕೈಲಿ ಬೈಸಿಕೊಳ್ಳೋದು ಮಾಮೂಲು. ಅಷ್ಟೇ ಅಲ್ದೆ, ಜೊತೆಲಿ ಇನ್ಯಾರೊ ನಮ್ಮೊಂದಿಗೆ ಬಂದವನನ್ನೂ ಬಿಡತಾರಾ, ಅವನನ್ನೂ ಬೈದು ಬಾಯಿ ಚಪಲ ತೀರಿಸಿಕೊಳ್ಳಬೇಕು. ವಿಶೇಷವಾಗಿ ನಮ್ಮ ಹಿಂದಿನ ಕಾಲದ ಬೃಹಚ್ಚರಣ ಮಹಿಳೆಯರ ಬಳಿ ಇರುವ ಅಸ್ತ್ರ ಗೊತ್ತಿದೆ ತಾನೆ?

"ಅವನಾ, ಅವು ಅಪ್ಪಡಿಯೇ "ಅಷ್ಟಾವಕ್ರತೀ ಮುಂಡಿ ಮಗು," ಪೋಯಿ ಪೋಯಿ ಅವನೆ ಜೊತೆಲೆ ಅಳಿಚಿಕುಂಡು ಪೋನಿಂಗ್ಯಾ, ಆಗರ್ ಕಾಯ್ಯಮೂ ಆಗಲ್ದೇ ಅನ್ನುದ್ದು ಗೊತ್ತು ತಾನೆ?" ಅಂತ ಹೆಂಡತಿಯ ಬೈಗಳನ್ನು ಕೇಳಿಸಿಕೊಂಡು ಅನುಭವಿಸಿದ್ದೇವೆ!

ಹಾಗಾದರೆ, ಈ ಅಷ್ಟಾವಕ್ರ ಅನ್ನುವವನು ಒಬ್ಬನು ಇದ್ದೇ ಇರಬೇಕಲ್ವೇ? ಯಾರಪ್ಪಾ ಅಂದು ಅಷ್ಟಾವಕ್ರು? ಒಂಗೆ ಅವ್ನೆ ಅವು ಪಾರ್ಕಾಮ.

ಜನಕ ಮಹಾರಾಜನ 'ವಿದೇಹ' ರಾಜ್ಯದಲ್ಲಿ ಮಹಾ ಪಂಡಿತ, ಪುರಾಣಗಳಲ್ಲಿ ಪ್ರಸಿದ್ದನಾದವನು ಆರುಣಿ ಮುನಿ. ತನ್ನ ಆಶ್ರಮದಲ್ಲಿ ವೇದ ಪಾಠಗಳನ್ನು ಹೇಳಿಕೊಡುತ್ತಿದ್ದ. ಅವನ ಆಶ್ರಮದಲ್ಲಿ 'ಕಹೋದ' ಎಂಬ ಬಹಳ ಬುದ್ದಿವಂತ ಶಿಷ್ಯನಿದ್ದ. ಕಹೋದನು ತನ್ನ ಗುರುಗಳಾದ ಆರುಣಿ ಮುನಿಯ ಮಗಳು "ಸುಜತ"ಳನ್ನು ವಿವಾಹ ಮಾಡಿಕೊಂಡ.

ಗರ್ಭಿಣಿಯಾದ 'ಸುಜತ'ಳು ವಿಶ್ರಾಂತಿ ಸಮಯದಲ್ಲಿ ಪ್ರತಿದಿನವೂ ತನ್ನ ಪತಿ ಕಹೋದನೊಂದಿಗೆ ಕುಳಿತು ತಾನೂ ವೇದ ಪಾಠಗಳನ್ನು ಕೇಳಿಸಿಕೊಳ್ಳುತ್ತಿದ್ದಳು. ಒಂದು ದಿನ! 'ಕಹೋದ'ನು ವೇದ ಪಠಣ ಮಾಡುತ್ತಿರುವಾಗ ಆಕಸ್ಮಿಕವಾಗಿ ಒಂದು ಶ್ಲೋಕವನ್ನು ತಪ್ಪಾಗಿ ಉಚ್ಚಾರಣೆ ಮಾಡುವುದನ್ನು ಸುಜತಳ ಗರ್ಭದಲ್ಲಿದ್ದ ಶಿಶುವು ಕೇಳಿಸಿಕೊಂಡು, ಗರ್ಭ ದಿಂದಲೇ ತಾಯಿಯ ಮೂಲಕ ತಪ್ಪನ್ನು ತಿಳಿಸಿತು.

ಇದರಿಂದ ಕೆಂಡಾಮಂಡಲವಾದ ಕಹೋದನು, ಗರ್ಭದಲ್ಲಿನ ತನ್ನ ಶಿಶುವಿಗೆ ಅಷ್ಟವಕ್ರನಾಗಿ (ಎಂಟು ರೀತಿಯ, ಕೈ ಕಾಲು ಮುಂತಾದವು ವಕ್ರವಾಗಿ) ಜನಿಸು ಎಂಬ ಶಾಪ ನೀಡಿದ.

ಅದರಂತೆ ಜನಸಿದ ಮಗುವಿಗೆ ಕೈಗಳು, ಕಾಲುಗಳು ವಕ್ರವಾಗಿ ಊನಗೊಂಡಿತ್ತು. ಅಷ್ಟಾವಕ್ರ ತನ್ನ ತಂದೆಗಿಂತಲೂ ಬಹಳ ಬುದ್ದಿವಂತ. ವೇದ, ಶಾಸ್ತ್ರಗಳಲ್ಲಿ ಬಹಳ ಬೇಗನೆ ಪಾರಂಗತನಾದ.

ಪ್ರಾಯ ಬಂದ ನಂತರ ಅನೇಕ ಸತ್ ಸಂಘಗಳನ್ನು ಆಯೋಜನೆ ಮಾಡಿ ಪ್ರಸಿದ್ಧ ಪಂಡಿತ ಜ್ಞಾನಿಯಾದ.

ಜನಕ ಮಹಾರಾಜರೂ ಆಗಾಗ ಅಷ್ಟಾವಕ್ರನ ಉಪದೇಶ ವನ್ನು ಕೇಳಲು ಬರುತ್ತಿದ್ದ.


ಛಂದೋಗ್ಯ ಉಪನಿಷತ್‌ನಲ್ಲಿನ ಉಲ್ಲೇಖದಂತೆ, ಅಷ್ಟಾವಕ್ರ ಗೀತೆಗಳು, ಸಂಹಿತೆಗಳು ಬಹಳ ಪ್ರಸಿದ್ಧ ವಾದವುಗಳು.

ಒಟ್ಟಿನಲ್ಲಿ ಅಷ್ಟಾವಕ್ರ ತನ್ನ ಜೀವನದಲ್ಲಿ ಯಾವುದೇ ತಪ್ಪು ಮಾಡದಿದ್ದರೂ, ನಾವಾಗಿಯೇ ಸೃಷ್ಟಿ ಮಾಡಿಕೊಳ್ಳುವ ಗೊಂದಲಗಳಲ್ಲಿ ವಿನಾಕಾರಣ ಅಷ್ಟಾವಕ್ರನಂತಹವರ ಹೆಸರನ್ನು ಉದಾಹರಣೆಯಾಗಿ ಮಧ್ಯದಲ್ಲಿ ಎಳೆದು ತಂದು ದೂಷಿಸುವ ಬದಲಾಗಿ, ನಾವು ಮಾಡಬೇಕಾದ ಮುಖ್ಯವಾದ ಕೆಲಸಗಳನ್ನು ನಮ್ಮ ಪಾಡಿಗೆ ನಾವು ಹೋಗಿ, ಕೆಲಸ ಮಾಡಿಕೊಂಡು ಬರುವುದು ಉತ್ತಮ, ಅಲ್ವಾ!

◆ ವಿ.ಎಸ್. ಮಣಿ

---

**ರೇಖಾ ಚಿತ್ರ** **◆ ಸೋನಿಯಾ ಶಿವರಾಂ**
**9845024620**




ವೈಚಾರಿಕ ಲೇಖನ

# ಯಯಾತಿ

**ಮೊ**ದಲಿಗೆ ಹಿನ್ನೆಲೆ....

'ಬೃಹಸ್ಪತಿ' ದೇವತೆಗಳಿಗೆ ಗುರುವಾದರೆ, 'ಶುಕ್ಲಾಚಾರ್ಯರು' ರಾಜ ವೃಷಪರ್ವನ ರಾಕ್ಷಸರ ರಾಜ್ಯದ ಕುಲ ಪುರೋಹಿತರು, ಹಾಗು ಅವರ ಗುರು.



ಶುಕ್ಲಾಚಾರ್ಯರು ತಪಸ್ಸು ಮಾಡಿ ಪರಮೇಶ್ವರ ನಿಂದ 'ಮೃತಸಂಜೀವಿನಿ' ವಿದ್ಯೆಯನ್ನು ವರವಾಗಿ ಪಡೆದರು.

ರಾಕ್ಷಸರು ಮತ್ತು ದೇವತೆಗಳ ನಡುವೆ, ಸಮರ–ಸಂಘರ್ಷ ಸಾಮಾನ್ಯವಾಗಿತ್ತು.

ದೇವತೆಗಳು ರಾಕ್ಷಸರನ್ನು ಕೊಂದರೆ, ಶುಕ್ಲಾಚಾರ್ಯರು ತಮ್ಮಲ್ಲಿನ ಮೃತಸಂಜೀವಿನಿ ವಿದ್ಯೆಯಿಂದ ಮತ್ತೆ ಬದುಕಿ ಸುತ್ತಿದ್ದರು. ಇದರಿಂದ ದೇವತೆಗಳಿಗೆ ದೊಡ್ಡ ತಲೆನೋವು ಉಂಟಾಯಿತು. ಎಷ್ಟೇ ರಾಕ್ಷಸರನ್ನು ಕೊಂದರೂ, ತಕ್ಷಣವೇ ಗುರುಗಳಾದ ಶುಕ್ಲಾಚಾರ್ಯರು ಮತ್ತೆ ರಾಕ್ಷಸರನ್ನು ಬದುಕಿಸುತ್ತಿದ್ದರು.

ಇದಕ್ಕೆ ಪರಿಹಾರ ಹುಡುಕಲು ಯತ್ನಿಸಿದ, ದೇವತೆಗಳ ಗುರುವಾದ ಬೃಹಸ್ಪತಿಯು ತನ್ನ ಮಗನಾದ 'ಕಚ'ನನ್ನು ಶುಕ್ಲಾಚಾರ್ಯರರ ಬಳಿಗೆ ವೇದಾಧ್ಯಯನ ಮಾಡುವ ನೆಪದಲ್ಲಿ ಕಳುಹಿಸಿ, ಶುಕ್ಲಾಚಾರ್ಯರ ಮನಗೆದ್ದು ಹೇಗಾದರೂ ಮೃತ ಸಂಜೀವಿ ಮಂತ್ರ ವಿದ್ಯೆಯನ್ನು ಕಲಿತುಕೊಳ್ಳುವಂತೆ ತಿಳಿಸುತ್ತಾನೆ. ಶುಕ್ಲಾಚಾರ್ಯರು, 'ಕಚ'ನನ್ನು ಶಿಷ್ಯನಾಗಿ ಸ್ವೀಕರಿಸಿದರು. ಕಚನು ಶ್ರದ್ಧೆ ಭಕ್ತಿಗಳಿಂದ ಗುರುಗಳ ಪ್ರೀತಿ, ವಿಶ್ವಾಸ ಗಳಿಸಿದ.

ಯೌವ್ವನದಲ್ಲಿದ್ದ ಕಚನ ರೂಪ, ವಿದ್ಯೆ, ವಿನಯಗಳಿಂದ ಶುಕ್ಲಾಚಾರ್ಯರ ಮಗಳು 'ದೇವಯಾನಿ' ಆಕರ್ಷಣೆಗೆ ಒಳಗಾಗುತ್ತಾಳೆ. ಇದನ್ನು ತಿಳಿದ ರಾಕ್ಷಸ ಕುಲದ ಶುಕ್ಲಾಚಾರ್ಯರ ಶಿಷ್ಯರು, ಕಚನನ್ನು ದ್ವೇಷಿಸಿ ತುಂಡು ತುಂಡಾಗಿ ಕತ್ತರಿಸಿ ಕೊಲ್ಲುತ್ತಾರೆ.

ತನ್ನ ಪ್ರೀತಿಯ ಕಚನನ್ನು ಕಾಣದ ದೇವಯಾನಿ ತಂದೆಯ ಬಳಿ ವಿಷಯ ತಿಳಿಸುತ್ತಾಳೆ. ಶುಕ್ಲಾಚಾರ್ಯರು ತಮ್ಮ ದಿವ್ಯ ದೃಷ್ಟಿ ಯಿಂದ, ಕಚನನ್ನು ತನ್ನ ರಾಕ್ಷಸ ಶಿಷ್ಯರು ಕೊಂದಿರುವುದಾಗಿ ಮಗಳಾದ ದೇವಯಾನಿಗೆ ತಿಳಿಸುತ್ತಾರೆ. ಕುಪಿತಳಾದ ದೇವಯಾನಿ, ತಂದೆಯಲ್ಲಿ ಮೃತಸಂಜೀವಿನಿ ವಿದ್ಯೆಯಿಂದ ಕಚನನ್ನು ಮತ್ತೆ ಬದುಕಿಸುವಂತೆ ವಿನಂತಿಸಿಕೊಳ್ಳುತ್ತಾಳೆ. ಕಚನು ಮತ್ತೆ ಬದುಕಿ ಬರುತ್ತಾನೆ. ಕಚನು ಮತ್ತೆ ಬದುಕಿಬಂದ ವಿಷಯ ತಿಳಿದ ಶುಕ್ಲಾಚಾರ್ಯರ ಶಿಷ್ಯರು, ಏನಾದರೂ ಉಪಾಯ ಮಾಡಿ ಕಚನನ್ನು ಕೊಂದು ಮತ್ತೆ ಹುಟ್ಟಿಬರದಂತೆ ಮಾಡಲೇ ಬೇಕೆಂಬ ನಿರ್ಧಾರ ಮಾಡಿ, ಮತ್ತೊಮ್ಮ ಕಚನನ್ನು ಕೊಂದು ದೇಹವನ್ನು ಸುಟ್ಟುಹಾಕಿ, ಆ ಬೂದಿಯನ್ನು ಶುಕ್ಲಾಚಾರ್ಯರಿಗೆ ಮದ್ಯಪಾನದಲ್ಲಿ ಬೆರಸಿ ಕುಡಿಸುತ್ತಾರೆ. ಕಚನು ಮತ್ತೆ ಕಾಣೆಯಾಗಿರುವುದನ್ನು ತಿಳಿದ ದೇವಯಾನಿ ವಿಷಯವನ್ನು ತಂದೆಗೆ ತಿಳಿಸಿದಳು. ಶುಕ್ಲಾಚಾರ್ಯರು ದಿವ್ಯ ದೃಷ್ಟಿ ಯಿಂದ ಹುಡುಕಿದಾಗ, ಕಚನು ಸುಟ್ಟು ಬೂದಿಯಾಗಿ ನನ್ನ ಹೊಟ್ಟೆಯ ಒಳಗೇ ಇದ್ದಾನೆ ಎಂದು ತಿಳಿಸಿ, ಆ ಬೂದಿಯಿಂದ ಮತ್ತೆ ಕಚನನ್ನು ಬದುಕಿಸಬೇಕಿದ್ದಲ್ಲಿ, ನನ್ನ ಹೊಟ್ಟೆಯನ್ನೇ ಸೀಳಬೇಕು. ಹಾಗೆ ನನ್ನ ಹೊಟ್ಟೆಯನ್ನು ಸೀಳಿದರೆ ನನಗೆ ಮರಣ ಬರುವುದು ಖಚಿತ, ಏನು ಮಾಡಲಿ? ಹೇಳು ಎಂದು ದೇವಯಾನಿಗೆ ತಿಳಿಸಿದರು.

ಆಗ ದೇವಯಾನಿಗೆ ಹೊಳೆದ ಉಪಾಯ ತಿಳಿಸುತ್ತಾಳೆ.

ತಂದೆಯೇ...., ನಿನ್ನ ದೇಹದ ಒಳಗೆ ಬೂದಿಯಾಗಿ ಇರುವ ಕಚನಿಗೆ ಮೃತಸಂಜೀವಿನಿ ವಿದ್ಯೆಯ ಮಂತ್ರವನ್ನು ಉಪದೇಶ ಮಾಡು, ಆಗ ಕಚನು ಬದುಕಿ ನಿನ್ನ ಹೊಟ್ಟೆಯನ್ನು ಸೀಳಿ ಹೊರ ಬರುತ್ತಾನೆ. ನಂತರ ನೀನು ಉಪದೇಶಿದ ಮಂತ್ರ ವಿದ್ಯೆಯಿಂದ ನಿನ್ನ ಮೃತ ದೇಹಕ್ಕೆ ಕಚನು ಪ್ರಾಣ ನೀಡಿದಾಗ ನೀನು ಬದುಕುಳಿಯಬಹುದಲ್ಲವೇ? ಎಂಬ ಸಲಹೆ ನೀಡಿದಳು. ಅದರಂತೆ ಕಚನು ಮತ್ತೊಮ್ಮೆ ಬದುಕಿ ಶುಕ್ಲಾಚಾರ್ಯರ ಉದರ ದಿಂದ ಹೊರಬಂದು, ಮರಣ ಹೊಂದಿದ್ದ ಗುರು ಶುಕ್ಲಾಚಾರ್ಯ ರನ್ನು ಬದುಕಿಸುತ್ತಾನೆ.

ಶುಕ್ಲಾಚಾರ್ಯರ ಉದರದಲ್ಲಿ ಸುರಾಪಾನದ ಜೊತೆ ಯಲ್ಲಿ ಬೂದಿಯಾಗಿ ಒಳಸೇರಿದ್ದ ಕಚನಿಗೆ ಮೃತ್ಯುಸಂಜೀವಿನಿ ಮಂತ್ರದ ಉಪದೇಶ ಮಾಡಿದ ನಂತರ, ಮತ್ತೆ ಬದುಕಿ ಬಂದ ಕಚನನ್ನು ನೋಡಿದ ದೇವಯಾನಿಗೆ ಆದ ಸಂತೋಷ ಅಷ್ಟಿಷ್ಟಲ್ಲ.

ದೇವಯಾನಿ ತನ್ನನ್ನು ವಿವಾಹ ಮಾಡೊಕೊಳ್ಳುವಂತೆ, ಕಚನಿಗೆ ತಿಳಿಸುತ್ತಾಳೆ. ಆದರೆ ಕಚನು, ತಾನು ನಿನ್ನ ತಂದೆಯಾದ ಶುಕ್ಲಾಚಾರ್ಯರ ಉದರದಿಂದ ಹೊರಬಂದು ಮರು ಜೀವ ಪಡೆದಿದ್ದೇನೆ, ಹಾಗಾಗಿ ನೀನು ನನ್ನ ಸೋದರಿಯ ಸಮಾನ, ವಿವಾಹ ಮಾಡಿಕೊಳ್ಳು ಸಾಧ್ಯವಿಲ್ಲ, ಎಂದು ತಿಳಿಸಿ ಅಲ್ಲಿಂದ ಹೊರಟು ಹೋಗುತ್ತಾನೆ.

**ಯಯಾತಿ, ದೇವಯಾನಿ, ಶರ್ಮಿಷ್ಠೆ**

ರಾಕ್ಷಸರ ರಾಜ್ಯದ ರಾಜನಾದ ವೃಷಪರ್ವನ ಮಗಳು 'ಶರ್ಮಿಷ್ಠೆ' ಮತ್ತು ಗುರು ಶುಕ್ಲಾಚಾರ್ಯರ ಮಗಳಾದ 'ದೇವಯಾನಿ' ಇಬ್ಬರೂ ಬಾಲ್ಯದ ಗೆಳತಿಯರು. ಮುಂದೊಂದು

ದಿನ ಇವರಿಬ್ಬರ ನಡುವೆ ಒಂದು ಸಣ್ಣ ವಿಚಾರದಲ್ಲಿ ಜಗಳವಾಗಿ, ಶರ್ಮಿಷ್ಠೆಯು ದೇವಯಾನಿಯನ್ನು ಅರೆ ನಗ್ನ ಸ್ಥಿತಿಯಲ್ಲಿ ನಿರ್ಜನ ಪ್ರದೇಶದ ಬಾವಿಗೆ ದೂಡುತ್ತಾಳೆ. ಬಹಳ ಸಮಯದವರೆಗೂ ದೇವಯಾನಿಯನ್ನು ಕಾಪಾಡಲು ಯಾರೂ ಬರಲಿಲ್ಲ.

['ನಹುಷ' ಚಂದ್ರ ವಂಶದ ಚಕ್ರವರ್ತಿ. ಪಾಂಡವರ, ಕೌರವರ, ಕುರು ವಂಶದ ಪೂರ್ವಜರಲ್ಲಿ ಪ್ರಮುಖನು. ಇವನ ಮಗನೇ ಯುವರಾಜನಾದ "ಯಯಾತಿ"]

ಅದೇ ಸಮಯದಲ್ಲಿ ಕಾಡಿನಲ್ಲಿ ಬೇಟೆಯಾಡಲು ಬಂದ ಯುವರಾಜ ಯಯಾತಿಗೆ, "ಕಾಪಾಡೀ, ಕಾಪಾಡೀ" ಎಂಬ ಹೆಣ್ಣಿನ ಧ್ವನಿ ಕೇಳಿಸಿದಾಗ, ಆ ಬಾವಿಯಿಲ್ಲಿ ಅರೆ ನಗ್ನ ಸ್ಥಿತಿಯಲ್ಲಿದ್ದ ದೇವಯಾನಿಯನ್ನು ನೋಡಿ ಕೈಹಿಡಿದು ಮೇಲೆತ್ತುತ್ತಾನೆ. ಬಾವಿಯಿಂದ ಹೊರಬಂದ ದೇವಯಾನಿ ಮತ್ತು ಯಯಾತಿಯ ನಡುವೆ ಅನುರಾಗ ಉಂಟಾಗಿ, ಅವರಿಬ್ಬರ ವಿವಾಹವೂ ನಡೆಯಿತು.

ಆದರೆ, ತನ್ನನ್ನು ಬಾವಿಗೆ ತಳ್ಳಿದ ಶರ್ಮಿಷ್ಠೆಯ ಮೇಲಿನ ಕೊಪ ಮಾತ್ರ ಕಡಿಮೆ ಆಗಲಿಲ್ಲ. ತನ್ನ ತಂದೆಯ ಬಳಿ ನಡೆದ ವಿಷಯವನ್ನು ತಿಳಿಸುತ್ತಾಳೆ. ಇದನ್ನು ತಿಳಿದ ಶುಕ್ಲಾಚಾರ್ಯರು, ಶರ್ಮಿಷ್ಠೆಯ ತಂದೆ ವೃಷಪರ್ವನಿಗೆ ವಿಷಯ ತಿಳಿಸಿ, ಇನ್ನು ಮುಂದೆ ನಿನ್ನ ರಾಜ್ಯದಲ್ಲಿ ಇರಲಾರೆ ಎಂದು ತಿಳಿಸಿದರು. ತನ್ನ ಮಗಳಾದ ಶರ್ಮಿಷ್ಠೆ ಮಾಡಿದ ತಪ್ಪಿಗಾಗಿ, ನಾನು ಕ್ಷಮೆ ಕೇಳುತ್ತೇನೆ, ಆದರೆ ರಾಜ್ಯ ಬಿಟ್ಟು ಹೋಗಬೇಡಿ ಎಂದು ವಿನಂತಿಸಿಕೊಳ್ಳುತ್ತಾನೆ. ಮಹಾ ಹಠಮಾರಿಯಾದ ದೇವಯಾನಿ ಇದಕ್ಕೆ ಒಪ್ಪಲಿಲ್ಲ. ತಂದೆಯಾದ ಶುಕ್ಲಾಚಾರ್ಯರನ್ನು ಈ ರಾಜ್ಯದಲ್ಲಿ ಇರಲು ಬಿಡುವುದಿಲ್ಲ, ಒಂದು ವೇಳೆ ಈ ರಾಜ್ಯದಲ್ಲಿ ಇರಬೇಕೆನ್ನುವುದಾದರೆ, ಬಾವಿಗೆ ತಳ್ಳಿ, ನನಗೆ ಅಪಮಾನ ಮಾಡಿದ ಶರ್ಮಿಷ್ಠೆಯು ನನ್ನ ಅರಮನೆಯ ಸೇವಕಿಯಾಗಿ ಇರಬೇಕು ಎಂಬ ನಿರ್ಬಂಧನೆ ವಿಧಿಸುತ್ತಾಳೆ. ಅನ್ಯಮಾರ್ಗವಿಲ್ಲದೆ, ರಾಜ ವೃಷಪರ್ವನ ಮಗಳಾದ ಶರ್ಮಿಷ್ಠೆಯು ದೇವಯಾನಿಗೆ ಸೇವಕಳಾಗಿ ಕೆಲಸ ಮಾಡಲು ಒಪ್ಪಿಕೊಳ್ಳುತ್ತಾಳೆ.

ತಾನು, ಯುವರಾಜನಾದ ಯಯಾತಿಯ ರಾಣಿ ಮತ್ತು ಶರ್ಮಿಷ್ಠೆಯು ನನ್ನ ಸೇವಕಿ ಎಂಬ ಅಹಂಕಾರವು ದೇವಯಾನಿಯ ತಲೆಗೆಹತ್ತಿ ಎಲ್ಲರನ್ನೂ ಅಸಡ್ಡೆಯಾಗಿ ಕಾಣಲು ಪ್ರಾರಂಭ ಮಾಡುತ್ತಾಳೆ. ಕೆಲವೊಮ್ಮೆ ಇದರ ಅನುಭವ ಗಂಡನಾದ ಯಯಾತಿಗೂ ಆಯಿತು.

ಯಯಾತಿಯು ನಿಧಾನವಾಗಿ ದೇವಯಾನಿಯಲ್ಲಿ ಆಸಕ್ತಿ ಕಳೆದುಕೊಂಡು ಶರ್ಮಿಷ್ಠೆಗೆ ಹೆಚ್ಚು ಹತ್ತಿರವಾಗುತ್ತಾನೆ. ಶರ್ಮಿಷ್ಠೆಗೂ ಇದು ಒಂದು ರೀತಿಯಲ್ಲಿ ದೇವಯಾನಿಯ ಮೇಲೆ ಸೇಡು ತೀರಿಸಿಕೊಳ್ಳುವ ಅವಕಾಶ ದೊರಕಿದಂತಾಯಿತು.

ಚಕ್ರವರ್ತಿಯಾದ ಯಯಾತಿ, ದೇವಯಾನಿಗೆ ತಿಳಿಯದಂತೆ ಶರ್ಮಿಷ್ಠೆಯನ್ನು ವಿವಾಹವಾಗುತ್ತಾನೆ.

ದೇವಯಾನಿ ಮತ್ತು ಶರ್ಮಿಷ್ಠೆ ಇಬ್ಬರಿಗೂ ಮಕ್ಕಳಾಗುತ್ತದೆ.

ಆದರೂ ಯಯಾತಿಯು ರಾಜ್ಯಭಾರದತ್ತ ಗಮನ ಹರಿಸದೆ, ಅನೇಕ ಸ್ತ್ರೀಯರೊಂದಿಗೆ ತನ್ನ ದೈಹಿಕ ದಾಹಗಳನ್ನು ತೀರಿಸಿಕೊಳ್ಳುದರಲ್ಲೇ ಕಾಲ ಕಳೆಯುತ್ತಾನೆ.

ಯಯಾತಿಯ ಈ ವರ್ತನೆಯಿಂದ ಕೊಪಗೊಂಡ ದೇವಯಾನಿ, ತಂದೆಗೆ ಈ ವಿಚಾರ ತಿಳಿಸಿ, ತನ್ನ ಗಂಡನಿಗೆ ಬುದ್ಧಿ ಹೇಳುವಂತೆ ವಿನಂತಿಸುತ್ತಾಳೆ.

ವಿಷಯ ತಿಳಿದ ಶುಕ್ಲಾಚಾರ್ಯರು ಯಯಾತಿಯನ್ನು ಕಂಡು ಕೋಪದಿಂದ, ನಿನಗೆ ಯಾವುದೇ ಸ್ತ್ರೀಯೊಂದಿಗೆ ಸುಖಪಡಲಾಗದ ಮುದಿತನ ಪ್ರಾಪ್ತಿಯಾಗಲಿ ಎಂಬ ಶಾಪ ನೀಡುತ್ತಾರೆ. ಮನನೊಂದ ಯಯಾತಿಯು ಈ ರೀತಿಯ ಕಠೋರ ಶಾಪದಿಂದ ಮುಕ್ತಿ ಪಡೆವ ಮಾರ್ಗವನ್ನು ತಿಳಿಸಬೇಕೆಂದು ಕೊರುತ್ತಾನೆ. ಅದಕ್ಕೆ ಶುಕ್ಲಾಚಾರ್ಯರು, ಯಾವುದೇ ಯೌವ್ವನದ ಪುರುಷ ನಿನ್ನ ಮುಪ್ಪನ್ನು ಸ್ವೀಕರಿಸಿದಾಗ, ಅವನ ಯೌವನ ನಿನಗೆ ಪ್ರಾಪ್ತಿ ಆಗುವುದಾಗಿ ತಿಳಿಸುತ್ತಾರೆ.

ಮುಪ್ಪು ಆವರಿಸಿದ ಯಯಾತಿಯು ಹಲ್ಲು ಕಿತ್ತ ಹಾವಿನಂತಾಗಿ, ಹಲವರಲ್ಲಿ ತನ್ನ ಮುಪ್ಪನ್ನು ಸ್ವೀಕರಿಸಿ, ಯೌವನವನ್ನು ನೀಡುವಂತೆ ಬೇಡುತ್ತಾನೆ. ಯಾರೂ ಒಪ್ಪದಿದ್ದಾಗ ತನ್ನ ಮಕ್ಕಳನ್ನೇ ಬೇಡುತ್ತಾನೆ. ತನ್ನಿಂದ ದೇವಯಾನಿಗೆ ಜನಿಸಿದ ಮಕ್ಕಳು ಇದಕ್ಕೆ ಒಪ್ಪುವುದಿಲ್ಲ. ಕೊನೆಗೆ ಶರ್ಮಿಷ್ಠೆಯ ಕೊನೆಯ ಮಗನಾದ "ಪುರು" ತಂದೆಯ ಮುದಿತನವನ್ನು ಸ್ವೀಕರಿಸಿ ತನ್ನ ಯೌವನವನ್ನು ತಂದೆ, ಯಯಾತಿಗೆ ಧಾರೆ ಎರೆಯುತ್ತಾನೆ.

ಮತ್ತಷ್ಟು ದಿನಗಳ ಕಾಲ ಕಾಮದ ಸುಖ ಅನುಭವಿಸಿದ ಯಯಾತಿ, ಕೊನೆಗೆ ಮಗನಾದ 'ಪುರು' ನನ್ನ ಸುಖಕ್ಕಾಗಿ ತಾನು ಮುಪ್ಪಿನಿಂದ ಬಳಲುತ್ತಿರುವುದನ್ನು ನೋಡಿ ಜೀವನದಲ್ಲಿ ಜಿಗುಪ್ಸೆ ಉಂಟಾಯಿತು. ಕೊನೆಗೆ ಶರ್ಮಿಷ್ಠೆಯ ಮಗ ಪುರು, ತನಗೆ ನೀಡಿದ ಯೌವನವನ್ನು ಹಿಂತಿರುಗಿಸಿ, ತಾನು ಅವನ ಮುಪ್ಪನ್ನು ಸ್ವೀಕರಿಸುತ್ತಾನೆ.

ಜೀವನದಲ್ಲಿ ಮಾಡಿದ ತನ್ನ ತಪ್ಪುಗಳ ಪ್ರಾಯಶ್ಚಿತ್ತಕ್ಕಾಗಿ ಮಗ 'ಪುರು'ವಿಗೆ ರಾಜ್ಯಭಾರ ನೀಡಿ ಶರ್ಮಿಷ್ಠೆಯೊಂದಿಗೆ, ಯಯಾತಿ ವಾನಪ್ರಸ್ಥಕ್ಕೆ ತೆರಳುತ್ತಾನೆ.

ಧನ್ಯವಾದಗಳು.

ಎಲ್ಲಾರ್ಕುರ್ ನಲ್ಲಾದ್ಗು.

◆ ವಿ.ಎಸ್. ಮಣಿ
9845055582

## ಉಮಾ ಚಂದ್ರಶೇಖರ್ ಒಂದು ನೆನಪು

ಝುಗಝುಗಿಸುವ ಜರಿ ಅಂಚಿನ ಸೀರೆ, ಹಣೆಯಲ್ಲಿ ದೊಡ್ಡ ಕುಂಕುಮದ ಬೊಟ್ಟು, ಕೆನ್ನೆಗೆ ಅರಿಸಿನ, ಕೈ ತುಂಬಾ ಹಸಿರು ಗಾಜಿನ ಬಳೆಗಳು. ಮುಡಿಯಲ್ಲಿ ಮಲ್ಲಿಗೆ, ಲಕ್ಷಣವಾಗಿ ಮೊರದ ಬಾಗಿನ ..... ಉಮಾ ಶೇಖರ್ ಸಾಕ್ಷಾತ್ ಗೌರಿಯಂತೆ ಕಂಗೊಳಿಸುತ್ತಿದ್ದಾರೆ........

ಆದರೆ .... ಇದೇನು...ಸಾಲಂಕೃತ ಉಮಾ ಮಲ್ಲಿಗೆ, ಸಂಪಿಗೆಯ ಹಾಸಿನ ಮೇಲೆ ನಡೆಯುತ್ತಾ ಮನೆಯಿಂದ ಹೊರಟೇಬಿಟ್ಟರು! "ಉಮಾ! ಉಮಾ! ಎಲ್ಲಿಗೆ ಹೋಗುತ್ತಿದ್ದೀರಿ?!" ಕೂಗಿದೆ .... ಕೂಗಿದೆ .....

ಬೆಚ್ಚಿಬಿದ್ದು ಕಣ್ಬಿಟ್ಟೆ ..... ದುಃಸ್ವಪ್ನ ....


ಅಂದು ಮುಂಜಾನೆ ಉಮಾ ಅವರ ಪಾರ್ಥಿವ ಶರೀರವನ್ನು ನೋಡಿ ಅವರ ಆತ್ಮಕ್ಕೆ ಶಾಂತಿ ಕೋರಿ ಬಂದಿದ್ದೆ. ಆ ದಿನವೆಲ್ಲಾ ಮನದಲ್ಲಿ ಅದೇ ದೃಶ್ಯ, ಅವರದೇ ನೆನಪು. ರಾತ್ರಿ ಮಲಗಿದಾಗ ಈ ದುಃಸ್ವಪ್ನ.

ಉಮಾ ಶೇಖರ್ ಅವರು ಇದ್ದದ್ದು ಬಸವನಗುಡಿಯ ಗರುತ್ಮನ್ ಬಡಾವಣೆಯಲ್ಲಿ ನಮ್ಮ ಮನೆಯ ಸಮೀಪದಲ್ಲಿಯೇ. ನಾನು ಆಗಾಗ ಉಮಾ ಅವರ ಅತ್ತಿಗೆಯರಾಗಿದ್ದ ವಿಜಯಲಕ್ಷ್ಮಮ್ಮ ಮತ್ತು ಪದ್ಮಮ್ಮನವರನ್ನು ಅವರ ನಿವಾಸ "ಸರಸ್ವತೀ ಕುಟೀರ"ಕ್ಕೆ ಹೋಗಿ ಭೇಟಿ ಮಾಡುತ್ತಿದ್ದುದು ಉಂಟು. ಉಮಾ ಅವರ ಜೊತೆ ಒಂದರ್ಧ ಘಂಟೆ ಕಳೆದು ನಂತರ ಅವರ ಅತ್ತಿಗೆಯರನ್ನು ನೋಡಲು ಮಹಡಿ ಹತ್ತುತ್ತಿದ್ದುದು ಪರಿಪಾಠ.

ಉಮಾ ಸಾಹಿತ್ಯಪ್ರಿಯೆ, ಭಾಷಾಪ್ರಿಯೆ ಆಗಿದ್ದವರು. ಬಿಡುವಿನ ಸಮಯದಲ್ಲೆಲ್ಲಾ ಒಂದು ಪುಸ್ತಕ ಕೈನಲ್ಲಿ ಇರುತ್ತಿತ್ತು. ಸಾಹಿತ್ಯದ ಕಾರ್ಯಕ್ರಮಗಳಿಗೆ ಹೋಗುತ್ತಿದ್ದುದು ಅಲ್ಲದೇ ಸಾಹಿತ್ಯದ ಬಗ್ಗೆ ಚರ್ಚೆಯಲ್ಲಿ ಉತ್ಸಾಹ ತೋರುತ್ತಿದ್ದವರು. ತಾವು ಓದಿದ ಪುಸ್ತಕಗಳ ಬಗ್ಗೆ ನನ್ನಲ್ಲಿ ಚರ್ಚಿಸುತ್ತಿದ್ದರು. ಇದಲ್ಲದೇ ಸ್ವೆಟರ್ ಹೆಣೆಯುವುದರಲ್ಲಿ ಆಸಕ್ತಿಯಿದ್ದವರು. ಬಗೆಬಗೆಯ ನಮೂನೆ ಸ್ವೆಟರ್ ಹೆಣೆಯುವುದರಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದರು. ಬ್ಯಾಂಕ್ ಉದ್ಯೋಗಿಯಾಗಿ ನಿವೃತ್ತಿ ಪಡೆದಿದ್ದ ಉಮಾ ಸದ್ಗೃಹಿಣಿ ಹಾಗೂ ಸ್ನೇಹಶೀಲೆಯಾಗಿದ್ದವರು. ಸಾವಿನ ನಂತರ ತಮ್ಮ ಶರೀರವನ್ನು ಸೈಂಟ್ ಜಾನ್ ಮೆಡಿಕಲ್ ಕಾಲೇಜಿಗೆ ನೀಡುವ ಮೂಲಕ ಉಮಾ ಅವರು ತಮ್ಮಲ್ಲಿ ಮನೆಮಾಡಿದ್ದ ಪ್ರಗತಿಪರ ಮನೋನೆಲೆಯನ್ನು ತೋರಿದವರು.

ಎಪ್ಪತ್ತೆರಡು ವಯಸ್ಸಾಗಿದ್ದ ಸಹೃದಯ, ಸಜ್ಜನ ಮಹಿಳೆ ಉಮಾ ಇನ್ನೂ ಕೆಲಕಾಲ ಜೀವಿಸಿರಬೇಕಿತ್ತು ಅನಿಸುತ್ತಿದೆ. ಆದರೆ, ಹುಟ್ಟು ಸಾವು ಈ ಸೃಷ್ಟಿಯಲ್ಲಿ ಸಹಜ. ಅದಕ್ಕಾಗಿ ದುಃಖಿಸುವುದು ಸರಿಯಲ್ಲ ಎಂದು ಸಮಾಧಾನ ತಂದುಕೊಳ್ಳಬೇಕಷ್ಟೆ.

ಶ್ರೀಮತಿ ಉಮಾರವರು ಸಂಘದ ಪೋಷಕ, ಪತಿ ಶ್ರೀ ಕೆ.ಸಿ. ಶೇಖರ್, ಇಬ್ಬರು ಹೆಣ್ಣುಮಕ್ಕಳು, ಮತ್ತು ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ.



**ಲಲಿತಮ್ಮ ಚಂದ್ರಶೇಖರ್**
ಬೆಂಗಳೂರು

### ಉಪಾಧ್ಯಾಯರಿಗೆ.....

* ಉಪಾಧ್ಯಾಯರು ಉಚ್ಚರಿಸಬಾರದ ಒಂದು ಅಕ್ಷರ – I

* ಉಪಾಧ್ಯಾಯರು ಪಾಲಿಸಬೇಕಾದ ಎರಡು ಅಕ್ಷರಗಳು – WE

* ಉಪಾಧ್ಯಾಯರಲ್ಲಿ ಇರಬಾರದ ಮೂರು ಅಕ್ಷರಗಳು – EGO

* ಉಪಾಧ್ಯಾಯರು ಆಚರಿಸಬಹುದಾದ ನಾಲ್ಕು ಅಕ್ಷರಗಳು – LOVE

* ಉಪಾಧ್ಯಾಯರು ರೂಢಿಸಿಕೊಳ್ಳಬೇಕಾದ ಐದು ಅಕ್ಷರಗಳು – SMILE

* ಉಪಾಧ್ಯಾಯರು ಅನುಸರಿಸಬೇಕಾದ ಆರು ಅಕ್ಷರಗಳು – LISTEN

* ಉಪಾಧ್ಯಾಯರು ಅವಲಂಬಿಸಬೇಕಾಗಿರುವ ಏಳು ಅಕ್ಷರಗಳು – EMPATHY

* ಉಪಾಧ್ಯಾಯರಿಗೆ ಅವಶ್ಯಕವಾದ ಎಂಟು ಅಕ್ಷರಗಳು – CREATIVE

* ಉಪಾಧ್ಯಾಯರು ಪ್ರತಿಕ್ಷಣವು ವೃದ್ಧಿಸಿಕೊಳ್ಳಬೇಕಾಗಿರುವ ಒಂಬತ್ತು ಅಕ್ಷರಗಳು – KNOWLEDGE

* ಉಪಾಧ್ಯಾಯರನ್ನು ಅದ್ವಿತೀಯವಾಗಿ ಪರಿವರ್ತಿಸುವ ಹತ್ತು ಅಕ್ಷರಗಳು – CONFIDENCE

# ಮಹಾಭಾರತದಲ್ಲಿ ಶಂಖದ ಮಹತ್ವ

**ಭ**ಗವಾನ್ ವೇದವ್ಯಾಸರು ತಮ್ಮ "ಮಹಾಭಾರತ" ಮಹಾಕಾವ್ಯದ ಭೀಷ್ಮ ಪರ್ವದಲ್ಲಿ "ಶ್ರೀಮದ್ ಭಗವದ್ಗೀತೆ"ಯ ಪ್ರಸ್ತಾಪ ಮಾಡಿದ್ದಾರೆ. ಶ್ರೀ ಕೃಷ್ಣ ಪರಮಾತ್ಮನು ಅರ್ಜುನನಿಗೆ ಕುರುಕ್ಷೇತ್ರದಲ್ಲಿ ಉಪದೇಶಿಸಿದ ವ್ಯಾಸ ವಿರಚಿತ 700 ಶ್ಲೋಕಗಳ ಭಗವದ್ಗೀತೆಯನ್ನು ಶ್ರೀ ಮಧುಸೂದನ ಸರಸ್ವತಿಗಳು ಹದಿನೆಂಟು ಅಧ್ಯಾಯಗಳಂತೆ ವಿಂಗಡಿಸಿ ಪ್ರತೀ ಅಧ್ಯಾಯಕ್ಕೂ ಹೆಸರುಗಳನ್ನು ಸೂಚಿಸಿದ್ದಾರೆ. ಇವುಗಳನ್ನು ಮೂರು ಷಟ್ಕಗಳಾಗಿ ವಿಂಗಡಿಸಿದ್ದಾರೆ; ಕರ್ಮಯೋಗ (1 ರಿಂದ 6 ಅಧ್ಯಾಯಗಳು), ಭಕ್ತಿಯೋಗ (7 ರಿಂದ 12 ಅಧ್ಯಾಯಗಳು) ಮತ್ತು ಜ್ಞಾನ ಯೋಗ (13 ರಿಂದ 18 ಅಧ್ಯಾಯಗಳು). ವಿಷಾದ ಯೋಗ ಎಂಬ ಮೊದಲನೆ ಅಧ್ಯಾಯದ ಕುರುಕ್ಷೇತ್ರ ರಣರಂಗದಲ್ಲಿ ಕೌರವರ ಮತ್ತು ಪಾಂಡವರ ಸೇನೆ ಯುದ್ಧಕ್ಕೆ ಸಜ್ಜಾಗಿರುವ ವಿವರಗಳನ್ನು ಸಂಜಯನು ಕುರುಪತಿ ಧೃತರಾಷ್ಟ್ರನಿಗೆ ತಾನು ವ್ಯಾಸರಿಂದ ವರವಾಗಿ ಪಡೆದ ದಿವ್ಯಚಕ್ಷುವಿನಿಂದ ದರ್ಶಿಸಿದ್ದನ್ನು ಹೇಳುತ್ತಿರುತ್ತಾನೆ.

ಕುರುಕ್ಷೇತ್ರ ಯುದ್ಧವು ಶಂಖನಾದದಿಂದಲೇ ಪ್ರಾರಂಭ ವಾದುದು. ಶಂಖವು ಯಾವುದೇ ಧರ್ಮಕಾರ್ಯವು ಪ್ರಾರಂಭಿಸುವ ಮೊದಲು ಮೊಳಗಿಸುವಂತಹ ಪವಿತ್ರವಾದ ಸಾಧನ. "ಶಂ" ಎಂದರೆ ಆನಂದ ಮತ್ತು "ಖ" ಎಂದರೆ ಆಕಾಶ. ಮಾನವ ಜೀವಿಗೆ ಭಗವಂತನಿಂದ ಪ್ರಾಪ್ತಿಯಾಗುವ ಆಕಾಶದಷ್ಟು ಆನಂದ, ಎಂದರೆ ಈ ಆನಂದಕ್ಕೆ ಎಲ್ಲೆ ಇಲ್ಲ.

**"ಪಾಂಚಜನ್ಯಾಯ ವಿದ್ಮಹೇ ಪಾವಮಾನಾಯ ಧೀಮಹಿ ತನ್ನ ಶ್ಶಂಖ ಪ್ರಚೋದಯಾತ್"** ಎಂಬ ಶಂಖ ಗಾಯತ್ರಿಯಲ್ಲಿ ಶಂಖನಾದ ಮಾಡಿದರೆ ಉದ್ವಿಗ್ನ ರಹಿತ ಮನಸ್ಸು, ಬುದ್ಧಿಯ ಸ್ಥಿರತೆ, ದೃಡ ಚಿತ್ತ ಮತ್ತು ಅಹಂಕಾರ ರಹಿತ ಅಭಿಮಾನ ಪ್ರಚೋದನೆಯಾಗುತ್ತದೆ.

ಭಗವದ್ಗೀತೆಯ ಮೊದಲನೆ ಅಧ್ಯಾಯದ 15 ಮತ್ತು 16ನೇ ಶ್ಲೋಕಗಳಲ್ಲಿ ಶ್ರಿ ಕೃಷ್ಣ ಮತ್ತು ಪಾಂಡವರ ಶಂಖಗಳ ಬಗ್ಗೆ ಉಲ್ಲೇಖ ಇದೆ.

ಶ್ರೀ ಕೃಷ್ಣನು **'ಪಾಂಚಜನ್ಯ'** ಎಂಬ ಹೆಸರಿನ ಶಂಖನಾದ ಮಾಡುತ್ತಾನೆ. ಭಗವಂತನ ಪ್ರಕೃತಿಯ ಮೂಲಕ ಪಂಚಭೂತ ಗಳಾದ ಆಕಾಶ, ವಾಯು, ಅಗ್ನಿ, ಜಲ ಮತ್ತು ಪೃಥ್ವಿಯಿಂದ ಕೂಡಿದ ಪ್ರಪಂಚ ಸೃಷ್ಟಿಯಾಗುತ್ತದೆ ಎಂದರ್ಥ. ಶಂಖವು ಸದಾ ಭಗವಂತನ ಕೈಯಲ್ಲಿರುವಂತೆ ಪ್ರಕೃತಿಯೂ ಅವನ ವಶ.

ಪೃಥೆಯ ಮಗನಾದ ಪಾರ್ಥ (ಅರ್ಜುನ)ನ ಶಂಖದ ಹೆಸರು **'ದೇವದತ್ತ'** ಪೃಥೆ ಎಂದರೆ ಪೃಥ್ವಿ. ಅರ್ಜುನನಂತೆ ಸಕಲ ಚರಾಚರ ವಸ್ತುಗಳು ಪೃಥ್ವಿಯಿಂದ ಬಂದು, ಪೃಥ್ವಿಯಲ್ಲಿ ಇದ್ದು ಮತ್ತು ಪೃಥ್ವಿಗೆ ಮರಳುವುದು. ಈ ಪ್ರಪಂಚದ ಪ್ರತಿಯೊಂದು ಜಡ ಮತ್ತು ಚೇತನಗಳಲ್ಲಿ ಭಗವಂತನೇ ವ್ಯಾಪಿಸಿ ನೆಲೆಸಿದ್ದಾನೆ. ಇದು ದೇವದತ್ತವಾಗಿ ಬಂದಿರುವ ಕೊಡುಗೆ ಎಂದು ಮಾನವ ಜೀವಿಗೆ ಮಾತ್ರ ದರ್ಶಿಸಲು ಸಾಧ್ಯ.

**'ಪೌಂಡ್ರ'** ಎಂಬುದು ಭೀಮನ ಶಂಖದ ಹೆಸರು. ಮಾನವ ಜೀವಿಗೆ ಲೌಕಿಕ ಮತ್ತು ಅಲೌಕಿಕದ ಸಾಧನೆಗೆ ಕರ್ಮವೇ ಪ್ರಧಾನ. ಕರ್ಮವು ಜ್ಞಾನಪ್ರಾಪ್ತಿಗೆ ಬಹಿರಂಗ ಸಾಧನ. ಭಗವದ್ಗೀತೆಯ ಮೂರನೆಯ ಅಧ್ಯಾಯದ ಐದನೆಯ ಶ್ಲೋಕದಲ್ಲಿ **"ನ ಹಿ ಕಶ್ಚಿತ್ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್"** ಎಂದು ತಿಳಿಸಿರುವಂತೆ ಯಾವ ಮನುಷ್ಯನೇ ಆಗಲಿ ಒಂದು ಕ್ಷಣವೂ ಬಿಡದೆ ಕಾಯ, ವಾಚ, ಮಾನಸಾ ಕರ್ಮ ಮಾಡುತ್ತಿರುತ್ತಾನೆ. ಪೌಂಡ್ರ ಎಂದರೆ ಬೃಹತ್. ಮಾನವನಿಗೆ ಕರ್ಮವೇ ಬೃಹತ್ತಾದ ಧರ್ಮ. ಇದರಿಂದ ಚಿತ್ತಶುದ್ಧಿಯಾಗಿ ಜ್ಞಾನ ಪ್ರಾಪ್ತಿಯಾಗುವುದು.

**'ಅನಂತವಿಜಯ',** ಧರ್ಮರಾಯನ ಶಂಖದ ಹೆಸರು. ಧರ್ಮರಾಯನು ಯಮ, ನಿಯಮ ಪಾಲನೆ ಮಾಡುವಲ್ಲಿ ಹೆಸರುವಾಸಿ. ನಾವು ಮಹಾಭಾರತದ ಯಕ್ಷ ಪ್ರಶ್ನೆಯಲ್ಲಿ ಧರ್ಮರಾಯನು ಯಮಧರ್ಮನಿಗೆ ಕೊಟ್ಟ ಉತ್ತರಗಳಿಂದ ತಿಳಿಯಬಹುದು. ಯಾವ ಮನುಷ್ಯನೇ ಆಗಲಿ ಧರ್ಮಯುತ ವಾಗಿ, ವಿಹಿತ ಕರ್ಮಗಳನ್ನು ಆಚರಿಸಿದ್ದೇ ಆದರೆ, ಆದಿ–ಅಂತ್ಯ ವಿಲ್ಲದ ವಿಜಯ ದೊರಕುತ್ತದೆ. ಧರ್ಮದಿಂದ ಕರ್ಮ ಮಾಡಿದರೆ ದೈವ ಸಹಾಯ, ಸಹನೆ ಮತ್ತು ಶಾಂತಿ ಸದಾ ಇರುತ್ತದೆ.

ನಕುಲನ ಶಂಖದ ಹೆಸರು **'ಸುಘೋಷ.'** ನಕುಲನು ವ್ಯವಸ್ಥೆ ಮತ್ತು ಅವ್ಯವಸ್ಥೆಗೂ ಮೇಲಿನವನು ಎಂದರ್ಥ. ನಕುಲ ಸತ್ಯ ಮತ್ತು ಮಧುರವಾಗಿ ಮಾತನಾಡುವವನು. ಮಾನವನೂ ಹಿತನಡತೆಯಿಂದ ಮೇಲಿನಂತೆ ವ್ಯವಹರಿಸಿದರೆ ಅವನ ಅಂತಃ ಸೌಂದರ್ಯವು ಆಚರಣೆ ಮೂಲಕ ವ್ಯಕ್ತವಾಗುತ್ತದೆ.

ಸಹದೇವನ ಶಂಖದ ಹೆಸರು **'ಮಣಿಪುಷ್ಪಕ.'** ಕಿರಿಯನಾದ ಪಾಂಡುಪುತ್ರ ಸಹದೇವನು ಪ್ರಾಜ್ಞ, ಜ್ಯೋತಿಷಿ. ಕುರುಕ್ಷೇತ್ರ ಯುದ್ಧ ಪ್ರಾರಂಭಿಸುವ ಮುನ್ನ ಶ್ರೀ ಕೃಷ್ಣ ಪರಮಾತ್ಮನು ಸಹದೇವನ ಬಳಿ ಯುದ್ಧ ಮಹೂರ್ತದ ವಿಚಾರದ ಬಗ್ಗೆ ಸಂಭಾಷಿಸುವನು. ಸಹದೇವ ಎಂದರೆ ದೈವತ್ವವು ಸದಾ ನಮ್ಮ ಜೊತೆಯಲ್ಲೇ ಇರುತ್ತದೆ ಎಂಬ ಅರಿವಿರುವವನು. ಮಣಿಪುಷ್ಪಕ ಎಂದರೆ ನವರತ್ನಗಳ ಹಾರ ಎಂದರ್ಥ. ಪುಷ್ಪವು ಸದಾ ಘಮಘಮಿಸುವುದು, ಅರ್ಚನೆಗೆ ಯೋಗ್ಯವಾದುದು. ಅದರಂತೆ ಮಾನವನಿಗೆ ದೊರಕಿರುವ ಸೌಲಭ್ಯ, ಸವಲತ್ತುಗಳನ್ನು ಆತ್ಮಜ್ಞಾನ ಪ್ರಾಪ್ತಿಗೆ ಬಳಸಿಕೊಳ್ಳುವುದಾದರೆ ಪುಷ್ಪದಂತಿರುವ ಸೌಖ್ಯ ಇದ್ದೇ ಇರುತ್ತದೆ.

ಧರ್ಮ (ಧರ್ಮರಾಯ), ಕರ್ತವ್ಯ ಪ್ರಜ್ಞೆ (ಅರ್ಜುನ), ಬಲ (ಭೀಮ), ಬದುಕಿನ ಸೌಂದರ್ಯ (ನಕುಲ), ಪ್ರಾಜ್ಞತೆ (ಸಹದೇವ) ಇವು ಪಂಚಪಾಂಡವರ ಸಂಕೇತ. ಧರ್ಮ ಮಾರ್ಗದಲ್ಲಿ ಕರ್ತವ್ಯ ಪ್ರಜ್ಞೆ ಯಿಂದ ಕರ್ಮ ಮಾಡಬೇಕು. ಆಗ ಬಲವು ಇದನ್ನು ಅನುಸರಿಸುತ್ತದೆ. ಬದುಕಿನ ಸೌಂದರ್ಯದ ಅರಿವಾಗಿ ಜ್ಞಾನಪೂರ್ಣ ಪ್ರಾಜ್ಞತೆಯ ದರ್ಶನವಾಗುತ್ತದೆ. ಕುರುಕ್ಷೇತ್ರದಲ್ಲಿ ಎಲ್ಲಾ ಶಂಖನಾದಗಳನ್ನು ಮೊಳಗಿಸಿದ್ದು ಧರ್ಮ ಸಂಸ್ಥಾಪನೆಗೆ ನಾಂದಿ ಎನ್ನುವಂತೆ ಇದೆ.

◆ **ಹೆಚ್.ಆರ್. ಲಲಿತಾ**
**9945199637**

# ಸುಸಂಸ್ಕೃತ ಯಾರು?

ಒಬ್ಬ ವ್ಯಕ್ತಿ ತನ್ನ ಇಹಲೋಕದ ಯಾತ್ರೆಯನ್ನು ಮುಗಿಸಿ ಸ್ವರ್ಗವನ್ನು ಸೇರಿದಾಗ ಒಬ್ಬ ದೇವತೆ ಬಂದು ಆತನನ್ನು ಎದುರುಗೊಂಡಳು. ಅವನನ್ನು ತುಂಬಾ ಗೌರವದಿಂದ ಕರೆದು ಕೊಂಡು ಸ್ವರ್ಗವನ್ನು ತೋರಿಸಲು ನಡೆದಳು. ಅದೊಂದು ಸುಂದರ ದೊಡ್ಡ ಕಟ್ಟಡ. ಅಲ್ಲಿ ಅನೇಕ ದೇವತೆಗಳು ಗಡಿಬಿಡಿ ಯಿಂದ ಕೆಲಸ ಮಾಡುತ್ತಿದ್ದರು. ದೊಡ್ಡ ದೊಡ್ಡ ಹಾಳೆಗಳ ಮೇಲೆ ಏನೇನೋ ಬರೆಯುತ್ತಿದ್ದು. ಬಂದ ವ್ಯಕ್ತಿ ದೇವತೆಗೆ ಕೇಳಿದ, 'ಯಾರು ಇವರೆಲ್ಲಾ? ಏನು ಮಾಡುತ್ತಿದ್ದಾರೆ?' ದೇವತೆ ಹೇಳಿದಳು "ಇದು ಸ್ವೀಕೃತಿ ವಿಭಾಗ" ಇಲ್ಲಿ ಭೂಮಿಯ ಜನರು ತಮ್ಮ ಪ್ರಾರ್ಥನೆಗಳಲ್ಲಿ ದೇವರಿಗೆ ಏನು ಕೇಳಿಕೊಂಡಿದ್ದಾರೋ ಅದನ್ನು ದಾಖಲೆ ಮಾಡುತ್ತಿದ್ದಾರೆ. ದಿನ ನಿತ್ಯವೂ ಕೋಟ್ಯಾಂತರ ಬೇಡಿಕೆಗಳು ಬರುತ್ತವೆ, ಅದಕ್ಕೇ ಇಲ್ಲಿನ ದೇವತೆಗಳಿಗೆ ಬಿಡುವಿಲ್ಲದ ಕೆಲಸ.

ದೇವತೆ ಈ ವ್ಯಕ್ತಿಯನ್ನು ಮುಂದೆ ಮತ್ತೊಂದು ವಿಸ್ತಾರವಾದ ವಿಭಾಗಕ್ಕೆ ಕರೆದೊಯ್ದಳು. "ಇದು ಬಟವಾಡೆ ವಿಭಾಗ", ಇಲ್ಲಿ ಏನು ಹಿಂದಿನ ವಿಭಾಗದಲ್ಲಿ ಜನರು ಯಾವ ಯಾವ ಬೇಡಿಕೆ ಗಳನ್ನು ತಮ್ಮ ಪ್ರಾರ್ಥನೆಗಳಲ್ಲಿ ಸಲ್ಲಿಸಿದ್ದರೋ ಅವೆಲ್ಲವುಗಳನ್ನೂ ಭಗವಂತ ಅನುಗ್ರಹಿಸಿ, ಆ ಅನುಗ್ರಹಗಳನ್ನು ಸುಂದರವಾದ ಹೊತ್ತಿಗೆಯೊಂದಿಗೆ ಆ ಜನರಿಗೆ ಬಟವಾಡೆ ಮಾಡುವುದು ಇಲ್ಲಿ ಕೆಲಸ. ಈ ವ್ಯಕ್ತಿ ಅಲ್ಲಿನ ಚಲನವಲನ ಗಳನ್ನು ಗಮನಿಸಿದ, ಒಬ್ಬ ದೇವತೆಯೂ ಬಿಡುವಿಲ್ಲದೆ, ಒಂದು ಕ್ಷಣವನ್ನೂ ಸಹ ವ್ಯರ್ಥ ಮಾಡದೆ ಸತತವಾಗಿ ದುಡಿಯುತ್ತಿದ್ದರು. ಅವರ ದುಡಿತಕ್ಕೆ ಕೊನೆಯೇ ಇಲ್ಲ ಎನ್ನಿಸಿತು.

ದೇವತೆ ಬಂದ ವ್ಯಕ್ತಿಯನ್ನು ಕರೆದುಕೊಂಡು ಮುಂದೆ ಬಂದಾಗ ಅಲ್ಲೊಂದು ತೀರ ಪಟ್ಟದಾದ ಕೊಠಡಿ ಇತ್ತು. ಅಲ್ಲಿ ಮೇಜಿನ ಹಿಂದೆ ಒಬ್ಬ ದೇವತೆ ಕುಳಿತಿದ್ದಾಳೆ. ಆಕೆಗೆ ಯಾವ ಕೆಲಸವೂ ಇಲ್ಲ. ಈತನಿಗೆ ಆಶ್ಚರ್ಯ ವಾಗಿ ಕೇಳಿದ, 'ಅರೆ ಇಲ್ಲಿ ಈಕೆಗೆ ಯಾವ ಕೆಲಸವೂ ಇಲ್ಲವಲ್ಲ? ಎಂದಾಗ, ಅವನೊಂದಿಗಿದ್ದ ದೇವತೆ ನಿಟ್ಟುಸಿರುಬಿಟ್ಟು ಹೇಳಿದಳು, "ಇದು ರಸೀದಿ ವಿಭಾಗ" ಜನರು ಮಾಡದ ಪ್ರಾರ್ಥನೆಗಳಿಗೆ ಅನುಗುಣವಾಗಿ ಭಗವಂತ ಅನುಗ್ರಹ ನೀಡುತ್ತಾನೆ. ಅವರು ಕಳುಹಿಸಿದ ರಸೀದಿಯನ್ನು ಇಲ್ಲಿ ದಾಖಲು ಮಾಡುತ್ತಾರೆ. ಹಾಗೆಂದರೆ ಅನುಗ್ರಹ ತಲುಪಿದ್ದಕ್ಕೆ ಜನ ರಸೀದಿ ಕಳುಹಿಸುವುದಿಲ್ಲವೆ?

ಆ ರಸೀದಿ ಪತ್ರ ಕಳುಹಿಸುವುದಾದರೂ ಹೇಗೆ? ಆ ವ್ಯಕ್ತಿ ಬೆರಗಾಗಿ ಕೇಳಿದ. ದೇವತೆ, ಅದುತುಂಬಾ ಸುಲಭ, ದೇವರ ಅನುಗ್ರಹ ತಲುಪಿದೊಡನೆ ಕೈ ಮುಗಿದು ಭಕ್ತಿಯಿಂದ ಕೃತಜ್ಞನೆಗಳು ಎಂದು ಒಮ್ಮೆ ಹೇಳಿದರೆ ಸಾಕು ರಸೀದಿ ಇಲ್ಲಿಗೆ ಬಂದು ಬಿಡುತ್ತದೆ ಎಂದಳು. ಆಗ ಆತ ಕೇಳಿದ 'ಯಾವ ಯಾವ ಅನುಗ್ರಹಕ್ಕೆ ಹೇಗೆಲ್ಲಾ ಧನ್ಯವಾದ ಹೇಳಬೇಕು?'

ದೇವತೆ ನಕ್ಕು ನುಡಿದಿಡಳು, "ನಿಮ್ಮ ಮನೆಯಲ್ಲಿ ಎರಡು ಹೊತ್ತು ಊಟಕ್ಕೆ ತೊಂದರೆ ಇಲ್ಲದಿದ್ದರೆ, ತಲೆಯ ಮೇಲೆ ಒಂದು ಸೂರಿದ್ದರೆ, ಮೈಮುಚ್ಚಲು ಸರಿಯದ ಬಟ್ಟೆ ಇದ್ದರೆ, ನೀವು ಪ್ರಪಂಚದ ಪ್ರತಿಶತ 25% ಭಾಗ್ಯ ಶಾಲಿಗಳ ಪಟ್ಟಿಯಲ್ಲಿದ್ದರೆ, ನಿಮ್ಮ ಬಳಿ ವ್ಯಯಿಸಲು ಒಂದಿಷ್ಟು ಹಣವಿದ್ದರೆ, ಬದುಕಲು ತಕ್ಕ ಶಿಕ್ಷಣವಿದ್ದರೆ, ನೀವು ಪ್ರಪಂಚದ ಕೇವಲ ಒಂದು ಪ್ರತಿಶತ ಪುಣ್ಯವಂತರ ಸಾಲಿನಲ್ಲಿ ನಿಂತಿದ್ದೀರಿ ಎಂದರ್ಥ. ದಿನನಿತ್ಯ ಎದ್ದಾಗ ಆರೋಗ್ಯಶಾಲಿಗಳಾಗಿದ್ದರೆ, ಪ್ರೀತಿ ಪಾತ್ರರಾದ ತಂದೆ ತಾಯಿಯ ಸೇವೆಯ ಅವಕಾಶವಿದ್ದರೆ, ಸಂತೋಷ ನೀಡುವ ಪರಿವಾರ ನಿಮ್ಮದಾಗಿದ್ದರೆ, ನೀವು ಆತ್ಮವಿಶ್ವಾಸದಿಂದ, ನೈತಿಕತೆ ಯಿಂದ ತಲೆ ಎತ್ತಿ ನಡೆಯುವಂತಿಗಿದ್ದರೆ, ನಿಮ್ಮಷ್ಟು ಅನುಗ್ರಹ ಶಾಲಿಗಳು ಮತ್ತೊಬ್ಬರಿಲ್ಲ. ದೇವರ ಅನುಗ್ರಗಳಿಗೆ ಒಂದು ಧನ್ಯವಾದ ಹೇಳಿದರೆ ಅದೇ ರಸೀದಿ.


ರಸೀದಿ ವಿಭಾದ ದೇವತೆಗೆ ಯಾವ ಕೆಲಸವೂ ಇಲ್ಲವೆಂದರೆ ಭಗವಂತನ ಅನುಗ್ರಹ ಪಡೆದ ಜನರು ಕೃತಜ್ಞತೆಯನ್ನೂ ಸಹ ಹೇಳಿದಷ್ಟು ಕೃತಘ್ನರಾಗಿದ್ದಾರೆಂದು ಬಂದ ವ್ಯಕ್ತಿಗೆ ತಿಳಿದು ಬಹಳ ದುಃಖವಾಯಿತು. ಕೃತಜ್ಞತೆ ಎನ್ನುವುದು "ಸುಸಂಸ್ಕೃತ" ಮನುಷ್ಯನ ಮೊದಲ ಲಕ್ಷಣ.

ಸಹಾಯ ಮಾಡಿದ್ದನ್ನು, ಮಾಡಿದವರನ್ನು ನೆನೆಯದಿ ರುವುದು ಸಂಸ್ಕೃತಿಯನ್ನು ಮರೆತಂತೆ.

◆ **ರವಿಕಿರಣ್.ಟಿ.ಎನ್.**
9972677005



**ಗಿರಿನಗರ ಸಂಗೀತ ಕಾರ್ಯಕ್ರಮದಲ್ಲಿ ಸಂಘದ ಸದಸ್ಯ ಖಂಜಿರಾ ವಿದ್ವಾನ್ ಕಾರ್ತಿಕ್**



**ಸಂಘದ ಸದಸ್ಯ ಶ್ರೀ ನಿರಂಜನ್‌ರವರಿಗೆ ಎಚ್.ಎ.ಎಲ್. ಲಲಿತಾಕಲಾ ಸಂಘದಿಂದ ಗೌರವಾರ್ಪಣೆ**

# ಸರ್ವ ಸದಸ್ಯರ ಸಭೆಯ ಛಾಯಾಚಿತ್ರಗಳು





ಪ್ರಸಾದ ಭೋಜನ














ಶುಚಿ-ರುಚಿ ಭೋಜನ ನೀಡಿದ ಬಾಣಸಿಗರ ತಂಡ

# ವಾರ್ತಾ ಚಿತ್ರಗಳು



ಶ್ರೀ ಬಾಲಸುಬ್ರಹ್ಮಣ್ಯಂ ಮತ್ತು ಶ್ರೀಮತಿ ಪೂರ್ಣಿಮಾರ ಪುತ್ರ
ಚಿ. ಸಚಿನ್ ಕುಮಾರ್, ಕ್ಯಾಲಿಫೋರ್ನಿಯಾದಲ್ಲಿ
ಕಂಪ್ಯೂಟರ್ ಸೈನ್ಸ್ ಮಾಸ್ಟರ್ ಡಿಗ್ರಿ ಪಡೆದಿರುತ್ತಾರೆ



ಕೋಲ್ಕತ್ತದಲ್ಲಿ ನಡೆದ ಪಶ್ಚಿಮ ಬಂಗಾಳ ರಾಜ್ಯ ಸರ್ಕಾರ ಮತ್ತು
ಹಿಜೊಲ್ ಫೋಲ್ ಏರ್ಪಡಿಸಿದ್ದ ಅಂತರರಾಷ್ಟ್ರೀಯ ವನ್ಯಜೀವಿ
ಚಿತ್ರ ಸ್ಪರ್ಧೆಯಲ್ಲಿ 2ನೇ ಬಹುಮಾನ ಪಡೆದ ಸದಸ್ಯ ಶ್ರೀ ಶಿವಕುಮಾರ್ ಎನ್.



ವಿದ್ವಾನ್ ಬಿ.ಎನ್.ಜಿ. ಪ್ರಸಾದ್‌ರವರ ಸಂಗೀತ ಕಚೇರಿ, ಜಯನಗರ



ಕು.ವಾಣಿಶ್ರೀ ರಾಮಕೃಷ್ಣರವರ ಸಂಗೀತ ಕಚೇರಿ, ಗಿರಿನಗರ



ನಾಗಕ್ಷೇತ್ರ ಕಿತ್ತಗಾನಹಳ್ಳಿಯಲ್ಲಿ ದಿನಾಂಕ 09–05–2019ರಂದು
ನಡೆದ ಸಾಮೂಹಿಕ ಬ್ರಹ್ಮೋಪದೇಶ



ಸಂಘದ ಸದಸ್ಯ ಶ್ರೀ ದಿಲೀಪ್‌ರವರ ಮೊಮ್ಮಗ
ಚಿ. ಸಮರ್ಥ ರಚಿಸಿದ ಚಿತ್ರ

*If undelivered please return to :*
*President*
**'Bruhacharana Sangha'**
No. 27/1, Bull Temple Road,
Basavanagudi,
Bengaluru - 560 004.

To,

Book-Post

Published by Sri B. Subramanyam, President, 'BRUHACHARANA SANGHA' No. 27/1, Bull Temple Road, Basavanagudi, Bengaluru - 560 004.
Printed at Keerthi Printers, Omkara, 240-F, 2nd D Cross, 2nd 'B' Main, Girinagar 1st Phase, Bengaluru - 560 085, Ph : 080-26722034